CLAUSE 1 etc.,

MR. DEPUTY SPEAKER.— The question is:

"That Clause 1, the Long title, the Preamble and the Enacting formula do stand part of the Bill."

The Motion was adopted

Clause 1, the Long title, the Preamble and the Enacting formula were added fo the Bill.

Motion To pass

SRI M. CHANDRASHEKAR.— Sir, I beg to move:

"That the Bangalore Development Authority (Amendment) Bill 1984 be passed."

MR. DEPUTY SPEAKER.— The question is:

"That the Bangalore Development Authority (Amendment) Bill 1984 be passed."

The Motion was adopted and the Bill was passed.

The Karnataka Electricity (Taxation) on Consumption) (Amendment) Bill 1983

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಜೆ.ಹೆಚ್. ಪಟೇಲ್ (ಅಬ್ಕಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—ಮಾನ್ಯ ಉಪಾಧ್ಯಕ್ಷರೇ, ೧೯೮೩ನೇ ಇಸವಿಯ ಕರ್ನಾಟಕ ವಿದ್ಯುಚ್ಛಕ್ತಿ ಬಳಕೆದಾರರ ಮೇಲೆ ವಿಧಿಸುವ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಗಿದೆ.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಉಪಾಧ್ಯಕ್ಷರೆ ಕಳೆದ ನವೆಂಬರ್‌ನಲ್ಲಿ ಹೊರಡಿಸಿದ ಸುಗ್ರೀವಾಜ್ಞೆಯ ಬದಲಿಗೆ ತಂದಿರುವ ವಿಧೇಯಕ ಇದು. ಇದರ ಮುಖ್ಯ ಉದ್ದೇಶ ರಾಜ್ಯದ ಯೋಜನಾ ವೆಚ್ಚ ವಿದ್ಯುತ್ ವಲಯದಲ್ಲಿ ವರ್ಷ ವರ್ಷ ಜಾಸ್ತಿಯಾಗುತ್ತಾ ಇರುವುದರಿಂದ ನಾವು ಎಲ್ಲಾ ರೀತಿಯಿಂದ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ ತೆರಿಗೆ ಹೆಚ್ಚಿಸಬೇಕು ಎಂಬುದು. ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದರೆ ನಾವು ಬಹಳ ಕಡಿಮೆ ತೆರಿಗೆಯನ್ನು ಹಾಕಿದ್ದೆವು. ಈ ವರ್ಷ ವಿದ್ಯುಚ್ಛಕ್ತಿ ವಲಯದಲ್ಲಿ ೧೬೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕ ಯೋಜನೆ ಇರುವುದರಿಂದ ಈ ತೆರಿಗೆಯನ್ನು ಅನಿವಾರ್ಯವಾಗಿ ಹೆಚ್ಚಿಸಬೇಕಾಗಿದೆ. ಈ ತೆರಿಗೆ ಹೆಚ್ಚಳ ಕೆಲವೊಂದು ವರ್ಗಗಳಿಗೆ ಕೇವಲ ೨ ಪೈಸೆಯಷ್ಟಾದರೆ ಇನ್ನು ಕೆಲವು ವರ್ಗಗಳಿಗೆ ೮ ಪೈಸೆಯಷ್ಟಾಗಬಹುದು. ಕೃಷಿ ವಲಯ, ಆಗತ್ಯ ಸೇವೆಗಳು, ಕುಡಿಯುವ ನೀರಿನ ಸರಬರಾಜು, ಸಾರ್ವಜನಿಕ ದೀಪಗಳು, ಧಾರ್ಮಿಕ ಸಂಸ್ಥೆಗಳು, ಪಾರ್ಕ್‌ಗಳು, ಮಾರ್ಕೆಟ್‌ಗಳು ಇಂಥವಕ್ಕೆ ತೆರಿಗೆಯ ದರ ಏರಿಕೆಯನ್ನು ಕಡಿಮೆ ಮಾಡಿದ್ದೇವೆ. ಉದ್ಯಮಿಗಳು ಯಾರು ತೆಡೆದುಕೊಳ್ಳಬಲ್ಲರೋ ಅಂಥವರಿಗೆ ಸ್ವಲ್ಪ ಜಾಸ್ತಿ ತೆರಿಗೆ ಮಾಡಿದ್ದೇವೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ದರ ಹೆಚ್ಚೇನೂ ಇಲ್ಲ. ನಾವು

ಕೆಲವು ವರ್ಗದವರಿಗೆ ಎರಡು ಪೈಸೆಯಿಂದ ೩ ಪೈಸೆಯವರೆಗೆ ಹೆಚ್ಚು ಮಾಡಿದರೆ ಮಹಾರಾಷ್ಟ್ರದಲ್ಲಿ ಮೂರು ಪೈಸೆಯಿಂದ ೩೦ ಪೈಸೆಯವರೆಗೆ ಒಂದು ಯೂನಿಟ್ಟಿಗೆ ತೆರಿಗೆ ಜಾಸ್ತಿ ಮಾಡಿದ್ದಾರೆ. ಕೇರಳದಲ್ಲಿ ೪ ಪೈಸೆಯಿಂದ ೩೦ ಪೈಸೆಯವರೆಗೆ ಜಾಸ್ತಿ ಮಾಡಿದ್ದಾರೆ. ಎಲ್ಲಾ ಸಮಗ್ರ ಚಿತ್ರವನ್ನು ತೆಗೆದು ಕೊಂಡು ನಿರ್ಧಾರ ಕೈಗೊಂಡಿದ್ದೇವೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದ ಬಹುತೇಕ ಜನರಿಗೆ ಅನುಕೂಲವಾಗುವಂತೆ ಕಡಿಮೆ ತೆರಿಗೆಯನ್ನು ಹಾಕಿದ್ದೇವೆ. ಯಾರು ತಡೆದುಕೊಳ್ಳಬಲ್ಲ ವರ್ಗದವರಿದ್ದಾರೆ ಅವರಿಗೆ ಸ್ವಲ್ಪ ಹೆಚ್ಚು ಹಾಕಿದ್ದೇವೆ. ಇದನ್ನು ವಿದ್ಯುಚ್ಛಕ್ತಿ ವಲಯಕ್ಕೆ ಬೇಕಾಗಿರುವ ತಕ್ಕ ಸಂಪನ್ಮೂಲವನ್ನು ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ಮಾಡಿದ್ದೇವೆ. ಈ ಬಗ್ಗೆ ಕಳೆದ ನವೆಂಬರ್‌ನಲ್ಲಿ ಒಂದು ಸಾಗ್ರೀವಾಜ್ಞೆ ಹೊರಡಿಸಿದ್ದು ಅದರ ಬದಲಾಗಿ ಈಗ ಈ ವಿಧೇಯಕವನ್ನು ತರಲಾಗಿದೆ.

† ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ).—ಮಾನ್ಯ ಅಧ್ಯಕ್ಷರೆ, ಈ ವಿದ್ಯುಚ್ಛಕ್ತಿ ದರವನ್ನು ಏರಿಸಿ ತಂದಿರುವ ವಿಧೇಯಕವನ್ನು ನಾನು ಸ್ಟ್ರಾಂಗ್ ಆಗಿ ವಿರೋಧ ಮಾಡುತ್ತೇನೆ. ಕಾಂಗ್ರೆಸ್ ಸರ್ಕಾರ ಇದ್ದಾಗ ಸಾಕಷ್ಟು ಬರ್ಡನ್ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದರು. ಇವತ್ತಿನ ದಿವಸ ಮಾನ್ಯ ಮಂತ್ರಿಗಳು ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶವನ್ನು ಉದಾಹರಣೆಯಾಗಿ ಕೊಟ್ಟು ನಾವು ಅವರಿಗಿಂತ ಕಡಿಮೆ ತೆರಿಗೆ ಹಾಕಿದ್ದೇವೆ ಎಂದು ಹೇಳಿದ್ದಾರೆ. ಆದರೆ ನಾನು ಈ ಸರ್ಕಾರಕ್ಕೇ ಒಂದು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಇಡೀ ದೇಶದಲ್ಲಿ ಎಲ್ಲರಿಗಿಂತ ಹೆಚ್ಚಿನ ತೆರಿಗೆ ಹೊರೆ ನಮ್ಮ ಕರ್ನಾಟಕ ಜನತೆಯ ಮೇಲಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಒಂದು ಹೇಳಿಕೆ ಕೊಟ್ಟಿದ್ದಾರೆ. ಇದನ್ನು ಮಾನ್ಯ ಮಂತ್ರಿಗಳು ಒಪ್ಪುತ್ತೀರಾ? ಮಾರ್ಕೆಟ್ ಸೆಸ್ ಮಹಾರಾಷ್ಟ್ರದಲ್ಲಿ ೩೫ ಪೈಸೆ, ಆಂಧ್ರದಲ್ಲಿ ೫೦ ಪೈಸೆ ಇದ್ದರೆ ನಮ್ಮಲ್ಲಿ ಎರಡು ರೂಪಾಯಿ ಇದೆ. ಮಹಾರಾಷ್ಟ್ರದಲ್ಲಿ ಜೋಳದ ಮೇಲೆ ಸೇಲ್ಸ್‌ಟ್ಯಾಕ್ಸ್ ಇಲ್ಲ. ಆದರೆ ನಮ್ಮ ರಾಜ್ಯದಲ್ಲಿ ನಾಲ್ಕು ರೂಪಾಯಿ ಹಾಕಿದ್ದಾರೆ. ಮದ್ರಾಸ್, ಮಹಾರಾಷ್ಟ್ರ, ಆಂಧ್ರದಲ್ಲಿ ಉದ್ದಿಮೆಗಳ ಮೇಲೆ ೮ ಪರ್ಸೆಂಟ್ ತೆರಿಗೆ ಇದ್ದರೆ ನಮ್ಮಲ್ಲಿ ೧೨ ಪರ್ಸೆಂಟ್ ಇದೆ. ನನ್ನ ಸ್ವಂತ ಜಿಲ್ಲೆಯಲ್ಲಿ ೮೦೦ ಲಾರಿಗಳಿವೆ. ಇವರೆಲ್ಲಾ ಇಲ್ಲಿ ತೆರಿಗೆ ಜಾಸ್ತಿ ಎಂದು ಆಂಧ್ರದಲ್ಲಿ ಹೋಗಿ ರಿಜಿಸ್ಟರ್ ಮಾಡಿಕೊಂಡು ಬರುತ್ತಿದ್ದಾರೆ. ಏಕೆಂದರೆ ಮೋಟಾರು ವೆಹಿಕಲ್ಸ್ ತೆರಿಗೆ ನಮ್ಮಲ್ಲಿ ಅಲ್ಲಿಗಿಂತ ಎರಡರಷ್ಟಿದೆ. ಇದರಿಂದಾಗಿ ನಮಗೆ ಬರಬೇಕಾದ ತೆರಿಗೆ ಹಣ ಬೇರೆ ಕಡೆ ಹೋಗುತ್ತಿದೆ. ಹೆಚ್ಚು ತೆರಿಗೆ ಹಾಕಿದರೆ ಹೆಚ್ಚು ಹಣ ಬರುತ್ತದೆ ಎಂಬ ಸರ್ಕಾರದ ಧೋರಣೆ ಏನಿದೆ ಇದನ್ನು ನಾನು ಒಪ್ಪುವುದಿಲ್ಲ. ತಾವು ದಯವಿಟ್ಟು ಜ್ಞಾಪಕ ದಲ್ಲಿಟ್ಟುಕೊಳ್ಳಬೇಕು, ನೀವು ಎಷ್ಟು ತೆರಿಗೆ ಜಾಸ್ತಿ ಮಾಡುತ್ತೀರೋ ಅಷ್ಟು ಕಳ್ಳತನ ಹೆಚ್ಚಾಗುತ್ತದೆ. ಭ್ರಷ್ಟಾಚಾರ ಬೆಳೆಯುತ್ತದೆ. ಇದನ್ನು ಗಮನಿಸಿಯೇ ಹಿಂದಿನ ಸರ್ಕಾರದವರು ಪಂಪ್‌ಸೆಟ್‌ಗೆ ವಿಧಿಸುತ್ತಿದ್ದ ವಿದ್ಯುತ್ ದರವನ್ನು ಕಡಿಮೆ ಮಾಡಿದರು. ಮೊದಲು ೫ ಎಚ್.ಪಿ. ಪಂಪ್‌ಸೆಟ್ಟಿಗೆ ೧ ಸಾವಿರ ರೂಪಾಯಿ ಎಲೆಕ್ಟ್ರಿಸಿಟಿ ಚಾರ್ಜ್ ಬರುತ್ತಿತ್ತು. ಅದನ್ನು ೨೫೦ ರೂಪಾಯಿ ಮಾಡಿದರು. ಇದರಿಂದ ವ್ಯತ್ಯಾಸವೇನೂ ಆಗಲಿಲ್ಲ. ಮೊದಲು ೮ ಕೋಟಿ ರೂಪಾಯಿ ಬರುತ್ತಿದ್ದರೆ ಆಮೇಲೂ ಅಷ್ಟೆ ಆದಾಯ ಬರುತ್ತಿತ್ತು. ಆದ್ದರಿಂದ ನೀವು ತೆರಿಗೆ ಮಾಡಿದರೂ ಕೂಡ ಹೆಚ್ಚು ಆದಾಯ ಬರುತ್ತದೆ ಎಂಬ ಕಲ್ಪನೆ ಸರಿಯಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಕೆಲವು ವರ್ಗದವರಿಗೆ ೨ ಪೈಸೆ ಹೆಚ್ಚಾದರೆ ಇನ್ನು ಕೆಲವು ವರ್ಗದವರಿಗೆ ೮ ಪೈಸೆ ಹೆಚ್ಚಾಗುತ್ತದೆ ಎಂದು ತಾವು ಹೇಳಿದ್ದೀರಿ. ಯಾರಿಗೆ ಹೆಚ್ಚು ಮಾಡಿದ್ದೀರಿ ಯಾರಿಗೆ ಕಡಿಮೆ ಮಾಡಿದ್ದೀರಿ ಎಂಬುದನ್ನು ವಿವರವಾಗಿ ಹೇಳಬೇಕಾಗಿತ್ತು.

Statement of objects and reasons reads thus:

> "The total rate including tax charged to the different classes of consumers in this State is lower than those in some neighbouring States and it is necessary to raise additional resources to meet the Government share of expenditure for the sixth plan."

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ನಮ್ಮಲ್ಲಿ ಕಡಿಮೆ ತೆರಿಗೆ ಇದೆ ಎಂದು ತಾವು ಹೇಳುತ್ತೀರಿ. ಆದರೆ ಮುಖ್ಯಮಂತ್ರಿಗಳು ದೇಶದ ಎಲ್ಲಾ ರಾಜ್ಯಗಳಿಗಿಂತ ಕರ್ನಾಟದಲ್ಲಿ ಹೆಚ್ಚು ತೆರಿಗೆ ಇದೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಮೊದಲು ಈ ತೆರಿಗೆಗಳನ್ನು ಕಡಿಮೆ ಮಾಡಿ. ಮಹಾರಾಷ್ಟ್ರದಲ್ಲಿ ಸೇಲ್ಸ್ ಟ್ಯಾಕ್ಸ್ ಕಡಿಮೆ ಇದೆ. ಆದೇ ರೀತಿ ನಮ್ಮಲ್ಲೂ ಕಡಿಮೆ ಮಾಡಿ. ನಿಮಗೆ ಯಾವುದು ಅನುಕೂಲವಾಗುತ್ತದೋ ಅದರ ಬಗ್ಗೆ ಬೇರೆ ರಾಜ್ಯದ ಉದಾಹರಣೆಯನ್ನು ತೆಗೆದುಕೊಂಡು ಹೇಳಿ ವರೆ ನಾವು ಅದನ್ನು ಒಪ್ಪುವುದಿಲ್ಲ. ಹಳ್ಳಿಗಳಲ್ಲಿರುವ ಬಡಜನರಿಗೆ ನೀವು ಒಂದು ಪೈಸೆ ಏರಿಸಿದರೂ ಕೂಡ ತೊಂದರೆಯಾಗುತ್ತದೆ. ಜನತಾ ಪಾರ್ಟಿ ಚುನಾವಣೆಯಲ್ಲಿ ಆರಿಸಿ ಬರುವಾಗ ಯಾವುದೇ ತೆರಿಗೆಗಳನ್ನು ಹಾಕುವುದಿಲ್ಲ ಎಂದು ಭರವಸೆ ಕೊಟ್ಟಿತ್ತು. ಹೇಳುವುದೊಂದು ಮಾಡುವುದೊಂದು ಬೇಡ. ನಿಮ್ಮ ಮಾನ ಮರ್ಯಾದೆ ಉಳಿಸಿಕೊಳ್ಳಬೇಕಾದರೆ ಹೇಳಿದಂತೆ ನಡೆದುಕೊಳ್ಳಬೇಕು. ಬೇರೆ ರಾಜ್ಯಗಳಿಗಿಂತ ಎಲ್ಲ ತೆರಿಗೆಗಳನ್ನು ಕಡಿಮೆ ಮಾಡಬೇಕು. ಆ ದೃಷ್ಟಿಯಿಂದ ಈ ಮಸೂದೆಯನ್ನೂ ವಾಪಸ್ ತೆಗೆದುಕೊಳ್ಳಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ).—ವಿದ್ಯುಚ್ಛಕ್ತಿ ದರವನ್ನು ಏರಿಸುವ ತಿದ್ದುಪಡಿ ಮಸೂದೆಯನ್ನು ತಂದು ಈ ಸರ್ಕಾರ ಕರ್ನಾಟಕ ರಾಜ್ಯದ ಜನತೆಗೆ ಮತ್ತಷ್ಟು ಭಾರವನ್ನು ಹೊರಿಸುತ್ತಿದೆ. ಈ ರೀತಿ ಭಾರ ಹೊರಿಸಿದರೆ ಪ್ರಯೋಜನವಾಗುವುದಿಲ್ಲ. ಎಲ್ಲಿರತಕ್ಕ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಗಮನ ಹರಿಸಬೇಕು. ತೆರಿಗೆ ಹೆಚ್ಚು ಮಾಡಿ ಬರತಕ್ಕ ಉತ್ಪನ್ನವನ್ನು ಹೆಚ್ಚು ಮಾಡುವ ಪ್ರಯತ್ನ ಮಾಡಿದಾಗ ಸಮಸ್ಯೆಗಳೂ ಹೆಚ್ಚಾಗುವ ಸಂಭವವುಂಟು. ಆನೇಕ ಹಳ್ಳಿಗಳಲ್ಲಿ, ತಾಲ್ಲೂಕುಗಳಲ್ಲಿ ೮ ಗಂಟೆಯಿಂದ ೧೨ ಗಂಟೆವರೆಗೆ ವಿದ್ಯುಚ್ಛಕ್ತಿ ಇಲ್ಲದೆ ಕೃಷಿ ಉತ್ಪಾದನೆಗೆ ತೊಂದರೆಯಾಗಿರುವುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿರಬಹುದು. ಹೆಚ್ಚಿಗೆ ತೆರಿಗೆ ಹಾಕಿ ಸರ್ಕಾರಕ್ಕೆ ಬರತಕ್ಕ ಸಂಪನ್ಮೂಲಗಳನ್ನು ಹೆಚ್ಚು ಮಾಡುವುದರ ಜೊತೆಗೆ ಸರ್ಕಾರದಿಂದ ಜನರಿಗೆ ಸಿಗಬೇಕಾದ ಸೌಲಭ್ಯವನ್ನೂ ಹೆಚ್ಚು ಮಾಡುವ ಬಗ್ಗೆ ಆಸಕ್ತಿ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ।। ವಿ.ಎಸ್. ಆಚಾರ್ಯ (ಉಡುಪಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯುತ್ ಮಂತ್ರಿಗಳು ಏನು ಬಿಲ್ ತಂದು ವಿದ್ಯುತ್ ಬಳಕೆ ಮೇಲೆ ಇರುವ ತೆರಿಗೆಯನ್ನು ಪರಮಾವಧಿ ೬ ಪೈಸೆಯಿಂದ ೮ ಪೈಸೆಗೆ ಏರಿಸುತ್ತಿದ್ದಾರೆ ಇದನ್ನು ಅನಿವಾರ್ಯವಾಗಿ ವಿರೋಧಿಸಬೇಕಾಗಿದೆ. ಕ್ಯಾಪಿಟಲ್ ವರ್ಕ್ಸ್‌ಗೆ ಬಂಡವಾಳ ಹೂಡಿಕೆಯಲ್ಲಿ ಪರ್ಸೆಂಪರ್ಸೇ ಜಾಸ್ತಿಯಾಗುತ್ತಿದ್ದು ಅದಕ್ಕೆ ಹಣ ಬೇಕಾಗಿದೆ ಎಂದು ಹೇಳಿದ್ದೀರಿ. ಆನೇಕ ಪ್ರಶ್ನೆಗಳು ಇದರಿಂದ ಉದ್ಭವವಾಗುತ್ತದೆ, ಈ ದಿನ ಉತ್ಪಾದನೆಯಾಗುತ್ತಿರುವ ವಿದ್ಯುತ್‌ನಲ್ಲಿ ಶೇಕಡಾ ೭೨ ಭಾಗವನ್ನು ಉದ್ಯಮಿಗಳು ಉಪಯೋಗ ಮಾಡುತ್ತಿದ್ದಾರೆ. ಆದರೆ ಅವರಿಂದ ವಿದ್ಯುತ್ ಮಂಡಲಿಗೆ ರೆವಿನ್ಯೂ ಬರುತ್ತಿರತಕ್ಕದ್ದು ಶೇಕಡಾ ೫೧ರಷ್ಟು ಮಾತ್ರ. ಸಣ್ಣಪುಟ್ಟ ಗೃಹ ಬಳಕೆಯವರು ಮತ್ತು ರೈತರು ಪಂಪ್‌ಸೆಟ್‌ಗೆ ವಿದ್ಯುತ್ ಬಳಕೆ ಮಾಡುತ್ತಿರುವುದು ಹಾಗೂ ಗೃಹೋಪಯೋಗಕ್ಕಾಗಿ ಶೇಕಡಾ ೧೨ರಷ್ಟು ವಿದ್ಯುತ್ ಬಳಸುತ್ತಿದ್ದು ಅವರು ಶೇಕಡಾ ೨೪ರಷ್ಟು ರೆವಿನ್ಯೂ ಕೊಡುತ್ತಿದ್ದಾರೆ. ರೈತರು ಶೇಕಡಾ ೬.೮ರಷ್ಟು ವಿದ್ಯುತ್ ಬಳಕೆ ಮಾಡಿ ಸುಮಾರು ೭ ಪರ್ಸೆಂಟ್ ಅಷ್ಟು ರೆವಿನ್ಯೂ ಕೊಡುತ್ತಿದ್ದಾರೆ. ಇಂತಹದ್ದರಲ್ಲೂ ಅವರ ಮೇಲೆ ಪವರ್ ಕಟ್ ಏರಿಸುತ್ತಿದ್ದೀರಿ. ಬಂಡವಾಳ ಹೂಡಿಕೆಯ ನೆಪದಲ್ಲಿ ಇಪತ್ತು ದರವನ್ನು ಹೆಚ್ಚು ಮಾಡಲು ಹೊರಟಿದ್ದೀರಿ. ಮೊನ್ನೆ ತಾನೇ ಯೂನಿಟ್‌ವೈಸ್ ಬೆಲೆಯನ್ನು ೧೦ ಪೈಸೆ ಹೆಚ್ಚು ಮಾಡಿ ೪೨ ಕೋಟಿ ರೂಪಾಯಿಗಳ ಆದಾಯವನ್ನು ಮಾಡಿಕೊಂಡಿರಿ. ಈ ದಿನ ಲೋಡ್ ಶೆಡ್ಡಿಂಗ್ ನಿಂದಾಗಿ ಹಾಗೂ ಅಸ್ಸೆಡ್ಯೂಲ್ಡ್ ಲೋಡ್ ಶೆಡ್ಡಿಂಗ್‌ನಿಂದಾಗಿ ಆಲ್ ಎಲೆಕ್ಟ್ರಿಕ್ ಹೋಂನವರು ಬಹಳ ತೊಂದರೆ ಅನುಭವಿಸುತ್ತಿದ್ದಾರೆ. ಇವತ್ತು ನೀವು ೫ ಪೈಸೆ ಜಾಸ್ತಿ ಮಾಡಿದರೂ ಕೂಡಾ ಕನೆಕ್ಟೆಡ್ ಕಿಲೋವ್ಯಾಟ್ಸ್ ಜಾಸ್ತಿಯಾಗಿ ಹಿಂದಿಗಿಂತಲೂ ೩ ಹಾಗೂ ೪ ಪಟ್ಟು ವಿದ್ಯುತ್ ಬಿಲ್ ಬರುತ್ತಿದೆ. ಇದನ್ನು ಕಂಡ ಜನ ತತ್ತರಿಸಿದ್ದಾರೆ. ಹಿಂದೆ ಎಷ್ಟು ವಿದ್ಯುತ್ ಖರ್ಚು ಮಾಡುತ್ತಿದ್ದೋವೋ ಅಷ್ಟೇ ವಿದ್ಯುತ್ ಬಳಕೆ ಮಾಡಿದರೂ ಈಗ ನಾಲ್ಕಾರು ಪಟ್ಟು ಹೆಚ್ಚು ಹಣ ಕಟ್ಟುವ ಪರಿಸ್ಥಿತಿ ಬಂದಿದೆ. ಇದು ಯಾವ ನ್ಯಾಯ ? ಒಟ್ಟು ಶೇಕಡಾ ೧೯ರಷ್ಟು ವಿದ್ಯುತ್ ಖರ್ಚು ಮಾಡುತ್ತಿರುವ ರೈತರ ಮೇಲೆ ಲೋಡ್ ಶೆಡ್ಡಿಂಗ್ ಹಾಕುವುದು ಸರಿಯಲ್ಲ. ಈ ಬಗ್ಗೆ ಬಂಡವಾಳ ಹೂಡಿಕೆಯ ಕಾರಣವನ್ನು ಒಡ್ಡುವುದು ಸಮಂಜಸವಾದುದಲ್ಲ. ಇಪತ್ತು ವಿದ್ಯುತ್ ಇಲ್ಲದೇ ಯಾವ ಕೆಲಸವೂ ನಡೆಯುವುದಿಲ್ಲ. ಜನತೆಯ ಕಷ್ಟಕ್ಕೆ ಸ್ಪಂದಿಸುವ ಸರ್ಕಾರ ಈ ರೀತಿಯ ಬೆಲೆ

† ಈ ಚಿನ್ಹೆ ಸಂಬಂದಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವಿರಿಕೆಯನ್ನು ತಡೆಗಟ್ಟಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇವತ್ತು ಏನು ಶರಾವತಿಯಿಂದ, ಶಿಂಶಾದಿಂದ ಹಾಗೂ ಇನ್ನಿತರ ಮೂಲದಿಂದ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ ಹಾಗೂ ಏನು ಎರವಲು ವಿದ್ಯುತ್ ಪಡೆಯಲಾಗುತ್ತಿದೆ ಆದರ ಲೆಕ್ಕವನ್ನು ಗಣನೆಗೆ ತೆಗೆದುಕೊಂಡರೆ ಆದಕ್ಕೆ ತಗಲುವ ಖರ್ಚು ಕೇವಲ ೧೭½ ಪೈಸೆಗಳಾಗುತ್ತವೆ. ಆದರೆ ಇದಕ್ಕೆ ರಿಟರ್ನ್ಸ್ ಪಡೆದು ಕೊಳ್ಳುತ್ತಿರುವುದು ೩೧½ ಪೈಸೆಯೆಂದರೆ ಇದು ಎಂತಹ ನ್ಯಾಯ ಸ್ವಾಮಿ ? ಆದ್ದರಿಂದ ಏನು ಅಲ್ಲಿ ವಿದ್ಯುತ್ ಪೋಲಾಗುತ್ತಿದೆ ಅದಕ್ಕೆ ಬೇಲಿ ಹಾಕಬೇಕು. ಹಾಗೂ ವಿತರಣ ಖರ್ಚು ಏನು ಇದೆ ಅದನ್ನು ತಗ್ಗಿಸಿಕೊಂಡು ಹೋದ ಪಕ್ಷದಲ್ಲಿ ಹೊಸ ತೆರಿಗೆ ಹಾಕುವ ಪ್ರಮೇಯವಿರುವುದಿಲ್ಲವೆಂದು ಹೇಳಿ ಈ ಒಂದು ಬಿಲ್ಲಿಗೆ ನಾನು ವಿರೋಧಪಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವೈ. ರಾಮಕೃಷ್ಣ (ಆನೇಕಲ್ಲು).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಏನು ಒಂದು ಮಸೂದೆಯನ್ನು ತಂದಿದ್ದಾರೆ ಅದನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಮಾನ್ಯ ಮಂತ್ರಿಗಳು ಹುಟ್ಟು ಸಮಾಜವಾದಿಗಳು. ಸಮಾಜವಾದದ ಬಗ್ಗೆ ಪ್ಲಾಟ್‌ಫಾರಂಗಳ ಮೇಲೆ ನಿಂತು ಭಾಷಣ ಮಾಡುವ ಇವರು ಇಂತಹ ಕೆಲಸಕ್ಕೆ ಕೈಹಾಕಿದರೇ ಎಂಬುದನ್ನು ತಿಳಿದು ವಿಷಾದ ಪಡಬೇಕಾಗಿದೆ. ಈ ದಿನ ಇವರು ಮಂತ್ರಿಗಳಾದ ಮೇಲೆ ಜನರು ತಮ್ಮ ಮನೆಯಲ್ಲಿ ಆಳವಡಿಸಿಕೊಂಡಿರುವ ಆಲ್ ಎಲೆಕ್ಟ್ರಿಕ್ ಹೋಂ ಸಪ್ಲೈಯನ್ನು ಕೈಬಿಡಬೇಕಾಗಿದೆಯೆಂದೆನಿಸುತ್ತಿದೆ. ಹಿಂದೆ ೧೫೦ ರೂಪಾಯಿ ಬಿಲ್ ಬರುತ್ತಿದ್ದ ಕಡೆಗಳಲ್ಲಿ ಇವತ್ತು ೧೦೦೦ ರೂಪಾಯಿ ಬಿಲ್ ಬರುತ್ತಿದೆ. ಇದು ಎಂತಹ ಸಮಾಜವಾದ ? ಈ ಒಂದು ವಿಷಯದ ಬಗ್ಗೆ ಒಂದು ಕಾರ್ಪೊರೇಷನನ್ನು ಸ್ಥಾಪನೆ ಮಾಡಿದ ಉದ್ದೇಶವೇನು ? ಶಿಂಷಾದಲ್ಲಿ ವಿದ್ಯುತ್ ಉತ್ಪಾದನೆ ಪ್ರಾರಂಭವಾಗಿ ನೂರು ವರ್ಷಗಳಾದವು. ಅಲ್ಲಿ ವಿದ್ಯುತ್ ಉತ್ಪಾದನೆಗೆ ಖರ್ಚು ಮಾಡಿದ ಬೆಚ್ಚ ಎಷ್ಟು ? ಅದೇ ರೀತಿ ಶರಾವತಿ, ತುಂಗಭದ್ರಾ ಗಳಲ್ಲೂ ಅತಿ ಕಡಿಮೆ ದರದಲ್ಲಿ ವಿದ್ಯುತ್‌ನ್ನು ಉತ್ಪಾದನೆ ಮಾಡಲಾಗುತ್ತಿದೆ. ಆದರೆ ಈಗ ಬಂಡವಾಳ ಹೂಡಿಕೆಗಾಗಿ ನೂರಾರು ಕೋಟಿ ರೂಪಾಯಿ ಬೇಕೆಂದು ಈ ದರವನ್ನು ವಿಧಿಸುತ್ತಿದ್ದಾರೆ. ಮಾನ್ಯ ಆಚಾರ್ಯ ಅವರು ವಿದ್ಯುತ್‌ಗೆ ತಗಲುವ ಬೆಚ್ಚ ಹಾಗೂ ಅದರಿಂದ ಪಡೆದುಕೊಳ್ಳುತ್ತಿರುವ ರಿಟರ್ನ್ಸ್‌ನಲ್ಲಿನ ವ್ಯತ್ಯಾಸವನ್ನು ತಿಳಿಸಿದರು, ಎಂದರೆ ಮೇನೇಜೀರಿಯಲ್ ಕಾಸ್ಟ್ ಎಷ್ಟು ಆಗುತ್ತಿದೆ ಎಂಬುದನ್ನು ಇದರಿಂದಲೇ ನಾವು ತಿಳಿದುಕೊಳ್ಳಬಹುದು. ಈ ರೀತಿಯಾದರೆ ಇದು ಬೋರ್ಡಿನ ಎಫಿಶಿಯನ್ಸಿಯನ್ನು ತೋರಿಸುತ್ತದೆಯೇ ? ಈಗ ಬಂದಬಂದವರೆಲ್ಲಾ ಟ್ಯಾಕ್ಸ್ ಹಾಕುವುದೇ ಒಂದು ಪದ್ಧತಿಯಾಗಿದೆ. ಆದ್ದರಿಂದ ಈ ಒಂದು ವಿಷಯದ ಬಗ್ಗೆ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಪಕ್ಕದ ರಾಜ್ಯಗಳಲ್ಲಿ ಯಾವುದಾದರೂ ದರ ಹೆಚ್ಚಿದ್ದರೆ ಅದನ್ನು ತೋರಿಸಿ ಸರಿಸಪು ಮಾಡಲು ನಮ್ಮಲ್ಲೂ ಹೆಚ್ಚು ಮಾಡುವ ಪದ್ಧತಿ ರೂಢಿಯಾಗಿಬಿಟ್ಟಿದೆ. ಅದೇ ರೀತಿ ಪಕ್ಕದ ರಾಜ್ಯದಲ್ಲಿ ಕಡಿಮೆ ದರ ಇದ್ದರೆ ಅದರಂತೆ ನಮ್ಮಲ್ಲೂ ಏಕೆ ಕಡಿಮೆ ಮಾಡುವುದಿಲ್ಲ? ಉದಾಹರಣೆಗೆ ಪಕ್ಕದ ರಾಜ್ಯವಾದ ಆಂಧ್ರಪ್ರದೇಶದಲ್ಲಿ ಭತ್ತ ಹಾಗೂ ಕಬ್ಬಿಗೆ ಏನು ಬೆಲೆ ನಿಗದಿ ಮಾಡಿದ್ದಾರೆ ಅದೇ ರೀತಿ ನಮ್ಮಲ್ಲೂ ಏಕೆ ನಿಗದಿ ಮಾಡುವುದಿಲ್ಲ ? ಅಂದರೆ ಯಾವುದು ಅನುಕೂಲ ಸಿಂಧುವೋ ಅದನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳುತ್ತೀರಿ. ಈ ಒಂದು ತೆರಿಗೆಯಿಂದ ಬೊಕ್ಕಸಕ್ಕೆ ೧೩ ಕೋಟಿ ರೂಪಾಯಿ ಬರುತ್ತದೆಯೆಂದು ಹೇಳುತ್ತೀರಿ.

> "As a result of the increase in the electricity tax by 2 paise, Government would expect additional rosources of the order of Rs. 13 crores in a full year and by the surcharge it would fetch additional resources for the Karnataka Electricity Board the order of Rs. 2 crores and Rs. 2.3 crores to Karnataka Power Corporation in a full year".

ಎಂದು ಹೇಳಿದ್ದೀರಿ. ಎಂದರೆ ಎಲ್ಲವನ್ನೂ ಲೆಕ್ಕಹಾಕಿ ನೋಡಿದರೆ ಸುಮಾರು ೨೦ ಕೋಟಿ ರೂಪಾಯಿಗಳು ಬರುತ್ತದೆ. ಎಂದರೆ ಒಂದು ಸಣ್ಣ ತಿದ್ದುಪಡಿಯಿಂದಾಗಿ ಇಷ್ಟು ಹಣ ಬರುತ್ತದೆ. ನಿಮ್ಮಂಥವರು ಈ ಖಾತೆಯನ್ನು ವಹಿಸಿಕೊಂಡ ಮೇಲೆ ಇದನ್ನು ಕಡಿಮೆ ಮಾಡುವುದು ನ್ಯಾಯ

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಆದರೆ ಇವತ್ತು ಏನಾಗಿದೆ ಎಂದರೆ ಅಧ್ಯಕ್ಷರೇ, ನಾವು ಬಾತ್‌ರೂಮ್‌ಗೆ ಹೋದ ತಕ್ಷಣ ಲೈಟ್ ಹೋಗುತ್ತದೆ. ಅಥವಾ ನಿಲುಗಡೆ ಮಾಡುತ್ತೀರಿ. ಇದು ನಮ್ಮ ಸರ್ಕಾರದ ಅದಕ್ಷತೆಯನ್ನು ತೋರಿಸುತ್ತದೆ. ಇದು lack of interest on the part of the Minister to pull up the Department ಎಂಬುದನ್ನು ನಾನು ನೊಂದ ಮನಸ್ಸಿನಿಂದ ಹೇಳಬೇಕಾಗಿದೆ. ನಾವು ಕಾಫಿ ಕುಡಿಯುತ್ತಿರುವಾಗ ಲೈಟ್ ಹೋಗುತ್ತದೆ. ಈ ರೀತಿ ವಿದ್ಯುತ್ ಹೋಗುವುದರಿಂದ ರಾತ್ರಿ ವೇಳೆ ಮಕ್ಕಳು ಸರಿಯಾಗಿ ಓದಿಕೊಳ್ಳದೇ ಫೇಲ್ ಆಗುತ್ತಾರೆ. ಹಿಂದೆ ಒಂದಾನೊಂದು ಕಾಲದಲ್ಲಿ ದೇಶದ ಎಲ್ಲಾ ಭಾಗದಿಂದ ಜನ ಬಂದು ಇಲ್ಲಿನ ಅಧಿಕ ಕಡಿಮೆ ಬೆಲೆಗೆ ಉತ್ಪಾದನೆ ಮಾಡಲಾಗುತ್ತಿದ್ದ ವಿದ್ಯುತ್ ಕೇಂದ್ರಗಳನ್ನು ನೋಡಿಕೊಂಡು ಹೋಗುತ್ತಿದ್ದರು.

2-30 ಪಿ.ಎಂ.

ಈಗ ನಮ್ಮಂತಹವರು ಆಲ್ ಎಲೆಕ್ಟ್ರಿಕ್ ಹೋಮ್ ಇಟ್ಟುಕೊಳ್ಳಬೇಕೆ, ಬಿಡಬೇಕೆ ಎಂದು ಯೋಚನೆ ಮಾಡಬೇಕಾಗಿದೆ. ಎರಡು ಹೊತ್ತು ಅಡುಗೆ ಮಾಡುವವರು ಒಂದು ಹೊತ್ತು ಏತಕ್ಕೆ ಮಾಡಬಾರದು, ಎರಡು ಲೈಟು ಉಪಯೋಗಿಸುವವರು ಒಂದು ಲೈಟು ಏತಕ್ಕೆ ಉಪಯೋಗಿಸ ಬಾರದು ಎಂದು ಯೋಚನೆ ಮಾಡಬೇಕಾಗಿದೆ. 20 ಕೋಟಿ ರೂಪಾಯಿ ಸುಲಭವಾಗಿ ಬರುತ್ತ ದೆಂದು ತಿಳಿದುಕೊಳ್ಳಬೇಡಿ. ತಮಗೆ ಯಾವ ರಾಜ್ಯದ್ದು ಕನ್‌ವೀನಿಯಂಟ್ ಆಗಿ ಕಾಣುತ್ತದೆ ಆ ರಾಜ್ಯದ್ದು ಹೇಳಿಬಿಡುತ್ತೀರಿ. ಮಾನ್ಯ ಮಂತ್ರಿಗಳು ಇರತಕ್ಕ ವಾಸ್ತವಾಂಶ ಹೇಳಬೇಕು. ಹಿಂದೆ ಇದೇ ಪರಿಸ್ಥಿತಿ ನಮ್ಮ ಸರ್ಕಾರಕ್ಕೂ ಇತ್ತು. ಭಾಗ್ಯಜ್ಯೋತಿ ಯೋಜನೆಯಲ್ಲಿ ಹರಿಜನರ ಮನೆಗಳಿಗೆ ದೀಪ ಕೊಟ್ಟಿರತಕ್ಕದ್ದು ಲೆಕ್ಕ ಹೇಳಿ ನೋಡೋಣ. ತಾವು ಎಷ್ಟು ಜನ ಬಡವರಿಗೆ ಕೊಟ್ಟಿದ್ದೀರಾ? ನಾವು ಕೊಟ್ಟಿರುವುದರಲ್ಲಿ 50 ಪರ್ಸೆಂಟ್ ಕೊಟ್ಟಿದ್ದರೆ ನಾನು ಸರೆಂಡರ್ ಆಗುತ್ತೇನೆ. ತಾವು ಆ ಕಡೆ ಗಮನ ಹರಿಸಲಿಕ್ಕೆ ಹೋಗಿಲ್ಲ ಎಂದು ಹೇಳುತ್ತೇನೆ. ನಾವು ಯಾವುದೇ ಗ್ರಾಮ ಪಂಚಾಯಿತಿ ಗಳ ಬೀದಿ ದೀಪಗಳನ್ನು ಡಿಸ್‌ಕನೆಕ್ಟ್ ಮಾಡಿರಲ್ಲಿಲ್ಲ, ಉಚಿತವಾಗಿ ದೀಪ ಕೊಟ್ಟಿದ್ದೆವು. ಆ ಕಡೆ ಕೂಡ ತಾವು ಗಮನ ಹರಿಸಿಲ್ಲ. ಸೋಷಿಯಲಿಸಮ್ ಬಗ್ಗೆ ಪ್ಲಾಟ್ ಫಾರಂ ಭಾಷಣ ಚೆನ್ನಾಗಿ ಮಾಡುತ್ತೀರಿ. ಈಗ ತಾವು ತಂದಿರತಕ್ಕ ಬಿಲ್ಲು ಬಡವನಿಂದ ಹಿಡಿದು ಪುಣ್ಯವಂತನವರೆಗೂ ಟಚ್ ಆಗುತ್ತದೆ. ಈ ಬಿಲ್ಲು ತಂದಿರತಕ್ಕದ್ದು ನಿಜವಾಗಿಯೂ ಸಾಧುವಾದುದಲ್ಲ. ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಈ ತರಹ ಬಿಲ್ಲುಗಳನ್ನು ತರುತ್ತಿದ್ದೀರಿ, ಬೆಲೆ ಏರಿಕೆ ಬಗ್ಗೆ ಬೇರೆ ಯಾವುದೋ ಮಾಡುತ್ತಾರೆ ಎಂದು ಹೇಳುತ್ತೀರಿ. ಈ ಬಿಲ್ಲನ್ನು ಮಾನ್ಯ ಮಂತ್ರಿಗಳು ವಾಪಸ್ಸು ತೆಗೆದುಕೊಳ್ಳ ಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಹದೇವ್ —ಅಧ್ಯಕ್ಷರೆ, ಹರಿಜನರ ಬೀದಿಯಲ್ಲಿ ಕಂಬಗಳನ್ನು ಹಾಕುವ ಬಗ್ಗೆ ಹೇಳಬೇಕಾಗಿದೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಎರಡು ಪೈಸೆ ಹೆಚ್ಚು ಮಾಡಿರುವ ಬಗ್ಗೆ ಹೇಳಬೇಕು.

ಶ್ರೀ ಎಂ. ಮಹದೇವ್.—ಈಗ ಯೂನಿಟ್ ಬೆಲೆ ಜಾಸ್ತಿ ಮಾಡಿದ್ದಾರೆ, ಪಂಪ್‌ಸೆಟ್ಟುಗಳ ಬಗ್ಗೆ ಬೆಲೆ ಜಾಸ್ತಿ ಮಾಡಿದ್ದಾರೆ. ಭಾಗ್ಯಜ್ಯೋತಿ ವಿಚಾರ ಕೂಡ ಈ ಬಿಲ್ಲಿಗೆ ಸಂಬಂಧಪಟ್ಟ ಹಾಗೆ ಬರುತ್ತದೆ. ಹರಿಜನರ ಬೀದಿಗಳಿಗೆ ಹಾಕತಕ್ಕ ದೀಪಗಳಿಗೆ ಕಡಿಮೆ ಕಾಸ್ಟ್ ಹಾಕಬೇಕು, ಪಂಪ್ ಸೆಟ್ಟುಗಳಿಗೆ ಉಪಯೋಗಿಸತಕ್ಕ ವಿದ್ಯುಚ್ಚಕ್ತಿಗೂ ಕಡಿಮೆ ಮಾಡಬೇಕು, ಪ್ರತಿಯೊಂದು ಯೂನಿಟ್ ಕಾಸ್ಟ್ ಕಡಿಮೆ ಮಾಡಿ ಈ ಬಿಲ್ಲನ್ನು ಮಾನ್ಯ ಮಂತ್ರಿಗಳು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳು ತ್ತೇನೆ.

ಶ್ರೀ ಜೆ.ಎಚ್. ಪಟೇಲ್ (ಅಬಕಾರಿ ಹಾಗೂ ವಿದ್ಯುಚ್ಚಕ್ತಿ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಭೀಮಣ್ಣ ಖಂಡ್ರೆಯವರು, ಚಿಮ್ಮನಕಟ್ಟಿಯವರು, ಡಾ।। ಆಚಾರ್ಯ ಅವರು ಹೇಳಿರುವ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಮುಂಚೆ ಮಾನ್ಯ ರಾಮಕೃಷ್ಣ ಅವರು ಕೆಲವು ಪ್ರಶ್ನೆಗಳನ್ನು ಏನು ಎತ್ತಿದ್ದಾರೆ ಅದಕ್ಕೆ ಉತ್ತರ ಕೊಡುತ್ತೇನೆ. ಮಾನ್ಯ ರಾಮಕೃಷ್ಣ ಅವರು ಮಾತನಾಡುತ್ತಾ ಬೇರೆ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ನಿಮಗ ಬೇಕಾದಾಗ ಮಾತ್ರ ಹೋಲಿಸು ತ್ತೀರಿ, ಬೇಡವಾದಾಗ ಬಿಡುತ್ತೀರಿ ಎಂದು ಹೇಳಿದರು. ಮೊದಲು ನಾವು ಏನು ಮಾಡಿದ್ದೇವೆ, ಈಗ ನಮ್ಮ ವಿದ್ಯುಚ್ಚಕ್ತಿ ವಲಯ ಎಷ್ಟು ಕೆಲಸ ಮಾಡುತ್ತಿದೆ, ವಿದ್ಯುಚ್ಚಕ್ತಿ ಮಂಡಲಿಯಲ್ಲಿ ಹೇಗೆ ಕೆಲಸ ನಡೆಯುತ್ತಿದೆ, ದಿನನಿತ್ಯ ಗ್ರಾಹಕನ ಮನೆಗಳಲ್ಲಿ ಆಗಿರತಕ್ಕ ಅನುಭವ ಏನು ಇದನ್ನು ಹೇಳ ಬೇಕು. ಅದನ್ನು ಬಿಟ್ಟು ಬೆಳಿಗ್ಗೆ ಎದ್ದ ತಕ್ಷಣ ಕಾಫಿ ಕುಡಿಯುವ ಸಂದರ್ಭದಲ್ಲಿ ಲೈಟ್ ಹೋಯಿತು

ಸ್ನಾನಕ್ಕೆ ನೀರು ಕಾಯುವುದಿಲ್ಲ, ಲೆಟರಿನ್‌ನಲ್ಲಿ ವಿದ್ಯುಚ್ಛಕ್ತಿ ಇರುವುದಿಲ್ಲ ಎಂದು ಹೇಳಿದರು. ಲೆಟರಿನ್ ನಲ್ಲಿ ವಿದ್ಯುಚ್ಛಕ್ತಿ ಬೇಡ ನೀರು ಇದ್ದರೆ ಸಾಕು. ಈಗ ನಾನು ಮೊದಲು ವಿವರಗಳನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇರಿಗೇಷನ್ ಪಂಪ್‌ಸೆಟ್‌ನಲ್ಲಿ ೧೯೮೨ನೇ ಜನವರಿಯಿಂದ ೧೯೮೩ನೇ ಡಿಸೆಂಬರ್‌ವರೆಗೆ ತಾವು ಮಾಡಿರತಕ್ಕದ್ದು ೨೫ ಸಾವಿರ ಗುರಿ ಇಟ್ಟುಕೊಂಡಿದ್ದು, ೨೪ ಸಾವಿರ ಸಾಧನೆ ಮಾಡಿದ್ದೀರಿ. ನಾವು ೧೯೮೩ರಲ್ಲಿ ೩೪ ಸಾವಿರ ಗುರಿ ಇಟ್ಟುಕೊಂಡಿದ್ದು, ಆದರಲ್ಲಿ ಕಳೆದ ಡಿಸೆಂಬರ್‌ಗೆ ೩೧,೪೦೦ ಇರಿಗೇಷನ್ ಪಂಪ್‌ಸೆಟ್ಟು ಎನರೆಜೈಸೇಷನ್ ಆಗಿರುವ ಅಚೀವ್‌ಮೆಂಟ್.

ಉಪಾಧ್ಯಕ್ಷರು.—ತಾವು ಮೊದಲೇ ಪ್ರೋಗ್ರೆಸ್ ಹೇಳಿದ್ದೀರಿ. ಈಗ ಅನಾವಶ್ಯಕ.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೆ, ಅವರು ಹೇಳುವಾಗ ಮಾನ್ಯ ರಾಮಕೃಷ್ಣ ಅವರು ಇರಲಿಲ್ಲ.

ಶ್ರೀ ಜೆ.ಹೆಚ್. ಪಟೇಲ್.—ರೂರಲ್ ಎಲೆಕ್ಟ್ರಿಫಿಕೇಷನ್ ನಾವು ೨,೦೬೦ ಗ್ರಾಮಗಳನ್ನು ಟಾರ್‌ಜೆಟ್ ಇಟ್ಟುಕೊಂಡು ೧,೩೯೪ ಮುಗಿಸಿದ್ದೇವೆ. ಇವರು ಒಂದು ವರ್ಷಕ್ಕೆ ಎರಡು ಸಾವಿರ ಗುರಿ ಇಟ್ಟುಕೊಂಡು ೧,೨೪೨ ಮಾಡಿದ್ದರು. ಇನ್ನು ಭಾಗ್ಯಜ್ಯೋತಿಯ ಬಗ್ಗೆ ಹೇಳಬೇಕೆಂದರೆ ಮಾನ್ಯ ರಾಮಕೃಷ್ಣ ಅವರು ಹಳ್ಳಿಗಳ ಕಡೆಗೆ ಇತ್ತೀಚೆಗೆ ಹೋಗಿಲ್ಲ ಎಂದು ಕಾಣುತ್ತದೆ. ಭಾಗ್ಯ ಜ್ಯೋತಿ ಯೋಜನೆಯಲ್ಲಿ ೫೦ ಸಾವಿರ ಗುರಿ ಇಟ್ಟುಕೊಂಡು ಕಳೆದ ಡಿಸೆಂಬರ್‌ಗೆ ೪೬ ಸಾವಿರ ಮಾಡಿದ್ದೇವೆ ಇವರು ೨೦ ಸಾವಿರ ಗುರಿ ಇಟ್ಟುಕೊಂಡು ೧೯ ಸಾವಿರ ಕೆಲಸ ಮಾಡಿದರು. ಇವರು ಭಾಗ್ಯ ಜ್ಯೋತಿ ಬಗ್ಗೆ ಉಪದೇಶ ಮಾಡುತ್ತಿದ್ದಾರೆ.

ಡಾ।। ವಿ.ಎಸ್. ಆಚಾರ್ಯ.—ಅಧ್ಯಕ್ಷರೆ, ಜಿಲ್ಲಾವಾರು ಲೆಕ್ಕ ಕೊಟ್ಟ ನರೆಮಗೆ ಸಮಾಧಾನ ಮಾಡಲಿಕ್ಕೆ ಸಾಧ್ಯವೇ ಇಲ್ಲ. ಮಾನ್ಯ ರಾಮಕೃಷ್ಣ ಅವರು ಹೇಳುವುದು ಸತ್ಯ ಇದೆ.

ಶ್ರೀ ವೈ. ರಾಮಕೃಷ್ಣ.—ಸೈಟು ಇಲ್ಲ, ಮನೆ ಇಲ್ಲ, ಇನ್ನು ಎಲೆಕ್ಟ್ರಿಸಿಟಿ ಎಲ್ಲಿ ಕೊಟ್ಟಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್.—ನೀವೆಲ್ಲ ಇದ್ದ ಮನೆಗಳನ್ನು ಕೆಡವಿ ಹೋಗಿದ್ದೀರಿ, ನಾವು ಯಾರಿಗೆ ಕೊಡುವುದು. ಎರಡೂವರೆ ಸಾವಿರ ರೂಪಾಯಿನಲ್ಲಿ ಬಿ.ಡಿ.ಓ. ಕಚೇರಿಯಲ್ಲೇ ಒಂದು ಸಾವಿರ ರೂಪಾಯಿ ಹೋದರೆ ಇನ್ನುಳಿದ ಒಂದೂವರೆ ಸಾವಿರ ರೂಪಾಯಿನಲ್ಲಿ ಕಟ್ಟಿಸುವುದು ಎಲ್ಲಿ. ಇವರು ಟ್ರೈಬಲ್ ಏರಿಯಾ ಎಂದು ಗುರುತಿಸಿ ಎಲೆಕ್ಟ್ರಿಫಿಕೇಷನ್ ೨೬ ಮಾಡಿದ್ದರು, ನಾವು ೨೮ ಮಾಡಿದ್ದೇವೆ. ಇನ್ನು ಹರಿಜನ ಬಸ್ತಿದಿಗಳಿಗೆ ೨೨೭ಕ್ಕೆ ಎಲೆಕ್ಟ್ರಿಫಿಕೇಷನ್ ಮಾಡಿದ್ದರು, ನಾವು ೪೦೦ಕ್ಕೆ ಮಾಡಿದ್ದೇವೆ. ಇದರ ಬಗ್ಗೆ ಬೇಕಾದರೆ ಜಿಲ್ಲಾವಾರು ಹೆಸರುಗಳನ್ನು ಕೊಡುತ್ತೇನೆ. ಇನ್ನು ಅಡಿಷನಲ್ ಸ್ಟ್ರೀಟ್ ಲೈಟ್ ಇವರು ಏನು ಮಾಡುತ್ತಿದ್ದರು, ಸೆನ್‌ಸಸ್ ವಿಲೇಜ್ ಇದ್ದರೆ ಹರಿಜನ ಕಾಲೋನಿಗೆ ಕೊಡುತ್ತಾ ಇರಲಿಲ್ಲ. ವಿಲೇಜ್ ಹೆಸರಿನಲ್ಲಿ ಎಲೆಕ್ಟ್ರಿಫಿಕೇಷನ್ ಆಗಿದೆ ಎಂದು ಹರಿಜನ ಕಾಲೋನಿಗಳಿಗೆ, ಪಡ್ಡರು, ಲಂಬಾಣಿ ಕಾಲೋನಿಗಳಿಗೆ ಕೊಡುತ್ತಾ ಇರಲಿಲ್ಲ, ಅದು ಸೆನ್‌ಸಸ್ ವಿಲೇಜ್‌ಗೆ ಸೇರಿದೆ ಎಂದು ಹೇಳುತ್ತಿದ್ದರು. ಅಂಥವುಗಳಿಗೆ, ೧೭೫೦ ಸ್ಟ್ರೀಟ್ ಲೈಟ್ ಕೊಟ್ಟಿರುವುದು ಇನ್ನು ತಾವು ಕೇಳುತ್ತಿರುವುದರಿಂದ ಟ್ರಾನ್ಸ್‌ಮಿಷನ್ ಲೈನ್‌ಗೆ ಸಂಬಂಧಪಟ್ಟಂತೆ ನಾನು ಹೇಳ ಬೇಕಾಗಿದೆ. ನಮ್ಮಲ್ಲಿ ಸರ್ಕ್ಯೂಟ್ ಕರೋ ಮಿಾಟರ್ ಎಂದು ಹೇಳುತ್ತಾರೆ. ಅದು ಸರಿಯಾದ ರೀತಿ ಯಲ್ಲಿ ಇಲ್ಲದೇ ಹೋದರೆ ವೋಲ್ಟೇಜ್ ಜಾಸ್ತಿಯಾಗುವುದು, ಇಲ್ಲವೇ ಡ್ರಾಪ್ ಆಗುವುದು ಆಗು ತ್ತದೆ. ಇವರ ಕಾಲದಲ್ಲಿ ೧ ವರ್ಷಕ್ಕೆ ೪೨೨ ಸರ್ಕ್ಯೂಟ್ ಕಿಲೋಮಿಾಟರ್‌ನ್ನು ಮಾಡಿದರು. ಆದರೆ ಈ ವರ್ಷ ನಾವು ೬೭೫ ಸರ್ಕ್ಯೂಟ್ ಕಿಲೋಮಿಾಟರನ್ನು ಮಾಡಿದ್ದೇವೆ. ಹೊಸದಾಗಿ ೪೫ ಸಬ್ ಸ್ಟೇಷನ್‌ನ್ನು ಕಟ್ಟಿಸಿದ್ದೇವೆ,

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಕೊಡುತ್ತಿರುವ ಅಂಕಿಅಂಶಗಳನ್ನು ನೋಡಿದರೆ ನಿಜವಾಗಿಯೂ ನಮಗೆ ಬಹಳ ಸಂತೋಷವಾಗುತ್ತದೆ, ಆದರೆ ನಾನು ತಮ್ಮ ಮೂಲಕ ಅವರಿಗೆ ಹೇಳಬಯಸುತ್ತೇನೆ. ನನ್ನ ಕ್ಷೇತ್ರದಲ್ಲಿ ಅನೇಕ ಕಡೆ ಯಾವುದೇ ಕೆಲಸವೂ ಆಗಿಲ್ಲ. ಬಹುಶಃ ಈ ಸರ್ಕಾರಕ್ಕೆ ಕೆಟ್ಟ ಹೆಸರನ್ನು ತರಬೇಕೆಂಬ ಉದ್ದೇಶ ಇಟ್ಟುಕೊಂಡು ಅಧಿಕಾರಿ ಗಳು ಈ ರೀತಿ ಕೆಲಸ ಮಾಡುತ್ತಿದ್ದಾರೋ ಏನೋ ಗೊತ್ತಿಲ್ಲ. ನಮ್ಮ ಶಿಕಾರಿಪುರ ತಾಲ್ಲೂಕಿನಲ್ಲಿ ೨೬ ಲಂಬಾಣಿ ತಾಂಡಗಳ ಪೈಕಿ ಆಗಲಿ ಅಥವಾ ಹೊಸ ಹ್ಯಾಮ್ಲೆಟ್‌ಗಳಲ್ಲಾಗಲಿ ಹೊಸದಾಗಿ ಒಂದು ಕೆಲಸವನ್ನೂ ಮಾಡಿಲ್ಲ.

ಶ್ರೀ ಭೀಮಣ್ಣ ಖಂಡ್ರೆ.—ಸ್ವಾಮಿ, ನಿಮ್ಮ ಕ್ಷೇತ್ರದಲ್ಲಿ ಮಾತ್ರವಲ್ಲ, ನಮ್ಮ ಬೀದರ್ ಜಿಲ್ಲೆಯಲ್ಲೂ ಕೂಡ ಯಾವುದೇ ಕೆಲಸವನ್ನೂ ಮಾಡಿಲ್ಲ.

ಶ್ರೀ ವಿ. ಎಸ್. ಆಚಾರ್ಯ.—ಸ್ವಾಮಿ, ನಮ್ಮಲ್ಲಿ ಒಮ್ಮೆ ನೆರೆ ಬಂದಾಗ ಬಹಳ ಜನರು ತಮ್ಮ ಮನೆ ಮಠಗಳನ್ನು ಕಳೆದುಕೊಂಡರು. ಯಾರು ಮನೆ ಮಠಗಳನ್ನು ಕಳೆದು ಕೊಂಡರೂ ಅಂಥವರಿಗೆ ಬೇರೆಕಡೆ ಒಂದು ಕಾಲೋನಿಯನ್ನು ಕಟ್ಟಿಸಿ ಕೊಟ್ಟರು. ಆ ಮನೆಗಳಿಗೆ ಹೊಸದಾಗಿ ವಿದ್ಯುಚ್ಛಕ್ತಿಯನ್ನು ಇದುವರೆಗೂ ಕೂಡ ಕೊಟ್ಟಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ನಮ್ಮ ವಿದ್ಯುಚ್ಛಕ್ತಿ ಮಂಡಲಿಯ ಫೈನಾನ್ಸ್ ಬಗ್ಗೆ ನಾನು ಒಂದು ಮಾತನ್ನು ಇಲ್ಲಿ ಹೇಳಬೇಕಾಗುತ್ತದೆ. ಇಲ್ಲಿ ಸರಿಯಾದ ರೀತಿಯಲ್ಲಿ ಮ್ಯಾನೇಜ್‌ಮೆಂಟ್‌ನ್ನು ನಡೆಸದೇ ಹೋದ ಪರಿಣಾಮವಾಗಿ ೧೯೬೦ರಿಂದ ೮೩ರ ಅವಧಿಯಲ್ಲಿ ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಆಡಳಿತ ಕ್ರಮ ಮತ್ತು ಅಲ್ಲಿನ ಆರ್ಥಿಕ ಪರಿಸ್ಥಿತಿ ತುಂಬಾ ಹದಗೆಟ್ಟಿತ್ತು. ಮಂಡಲಿಗೆ ಬರಬೇಕಾಗಿದ್ದ ಬಾಕಿ ೨೮ ಸಾವಿರ ರೂ.ಗಳನ್ನು ಸರಿಯಾಗಿ ವಸೂಲ್ಮಾಡಿರಲಿಲ್ಲ. ಬಿಲ್ಲಿಂಗ್ ವ್ಯವಸ್ಥೆ ಸರಿಯಾಗಿರಲಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಮ್ಯಾನೇಜ್‌ಮೆಂಟ್‌ನವರಿಗೂ ಮತ್ತು ಯೂನಿಯನ್‌ರವರಿಗೂ ಪರಸ್ಪರ ಸರಿಯಾದ ಹೊಂದಾಣಿಕೆ ಇರಲಿಲ್ಲ. ಈ ಆಡಳಿತ ಮಂಡಲಿಯಲ್ಲಿ ಕೆಲಸಕ್ಕೆ ಬಾರದ ಕೆಲಸಗಳು ಆದುದು ಮಾನ್ಯ ರಾಮಕೃಷ್ಣರವರ ಕಾಲದಲ್ಲಿ...

ಶ್ರೀ ವೈ. ರಾಮಕೃಷ್ಣ.—ಸ್ವಾಮಿ, ಈ ಕಟ್ಟುಕತೆಗಳನ್ನೆಲ್ಲಾ ನಮ್ಮ ಹತ್ತಿರ ಹೇಳಬೇಡಿ. ಇನ್ನು ಎಷ್ಟು ದಿವಸದವರೆಗೆ ನಿಮ್ಮ ಈ ಕಟ್ಟುಕತೆಗಳನ್ನು ಮಾಡುತ್ತೀರಿ? ಹಿಂದಿನ ಸರ್ಕಾರದಲ್ಲಿ ಒಳ್ಳೆಯ ಕೆಲಸವಾಗಿದೆ ಎಂದು ರಿಪೋರ್ಟ್ ಇದೆಯೆಂದು ನೀವೇ ಹೇಳುತ್ತಿದ್ದೀರಿ. ಅಷ್ಟು ಹೊಗಳಿ ಈಗ ಹಿಂದಿನ ಸರ್ಕಾರದಲ್ಲಿ ಅಂಥ ಒಳ್ಳೆಯ ಕೆಲಸಗಳು ಏನೂ ಆಗಿಲ್ಲವೆಂದು ಹೇಳುತ್ತಿದ್ದಿರಿ. ಅಂದಮೇಲೆ ನೀವು ಮೊದಲು ಹೇಳಿದ್ದಕ್ಕೂ ಈಗ ಹೇಳುತ್ತಿರುವುದಕ್ಕೂ ಒಂದಕ್ಕೊಂದು ಸಾಮರಸ್ಯವೇ ಇಲ್ಲ.

ಶ್ರೀ ಜೆ. ಹೆಚ್. ಪಟೇಲ್.—ನೀವು ಏನು ಮಾಡಿದ್ದಿರಿ ಅದಕ್ಕಿಂತ ಎರಡರಷ್ಟು ಕೆಲಸವನ್ನು ನಾವು ಮಾಡಿದ್ದೇವೆ.

ಶ್ರೀ ವೈ. ರಾಮಕೃಷ್ಣ.—ರೂರಲ್ ಎಲೆಕ್ಟ್ರಿಫಿಕೇಷನ್‌ನಲ್ಲಿ ೨ ಸಾವಿರ ಟಾರ್ಜೆಟ್ ಇಟ್ಟುಕೊಂಡಿದ್ದುದರಲ್ಲಿ ೧೯೦೦ ಅಚೀವ್‌ಮೆಂಟ್ ಆಗಿದೆ ಎಂದು ಹೊಗಳಿ ಈಗ ಏತಕ್ಕೆ ಬೈಯುತ್ತಿದ್ದೀರಿ. ವಿದ್ಯುಚ್ಛಕ್ತಿ ಮಂಡಲಿಯಲ್ಲಿ ದುಡ್ಡಿಲ್ಲದೆ ಹೋಗಿದ್ದಿದ್ದರೆ ಇಷ್ಟು ಪ್ರೋಗ್ರೆಸ್ ಹೇಗೆ ಸಾಧ್ಯವಾಗುತ್ತಿತ್ತು?

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೆ, ಕೇವಲ ಕಂಭ ನೆಟ್ಟು ಒಂದು ಲೈನ್ ಎಳೆದರೆ ಅದೊಂದು ಮಹಾ ಸಾಧನೆ ಎಂದು ಮಾನ್ಯ ಸಚಿವರು ತಿಳಿದುಕೊಂಡಿದ್ದಾರೆಯೆ?

ಶ್ರೀ ಜೆ. ಹೆಚ್. ಪಟೇಲ್.—ಇಲ್ಲ, ಇದರ ಜೊತೆಗೆ ಇನ್ನೊಂದು ಕೆಲಸ ಮಾಡಬೇಕಾಗಿತ್ತು. ಅದು ಏನೆಂದರೆ, ಎಲೆಕ್ಟ್ರಿಕ್ ಲೈನ್ ಹಾಕಿದ ಮೇಲೆ ನಿಮ್ಮನ್ನು ಅದಕ್ಕೆ ಮುಟ್ಟಿಸಬೇಕಾಗಿತ್ತು. ಆದರೆ ಅದನ್ನು ನಾವು ಮಾಡಲಿಲ್ಲ. ಸ್ವಾಮಿ, ಹಿಂದಿನ ಸರ್ಕಾರ ಆಡಳಿತದಲ್ಲಿದ್ದಾಗ ಸರ್ಕಾರದ ಕಾರ್ಖಾನೆಗಳಿಂದಲೇ ಸುಮಾರು ೨೮ ಕೋಟಿ ರೂ.ನಷ್ಟು ಬಾಕಿ ಬರಬೇಕಾಗಿತ್ತು. ಆದರೆ ಅದನ್ನು ಸರಿಯಾಗಿ ವಸೂಲ್ಮಾಡಲಿಲ್ಲ. ಆಗ ಬಿಲ್ಲಿಂಗ್ ವ್ಯವಸ್ಥೆ ಕೂಡ ಸರಿಯಾಗಿರಲಿಲ್ಲ. ಆದರೆ ಈ ಸಾರಿಯಿಂದ ಸಿಸ್ಟಂ ಇಂಪ್ರೂವ್‌ಮೆಂಟ್ ಮಾಡಲು ನಾವು ಹೆಚ್ಚು ಗಮನ ಕೊಡಬೇಕಾಗಿದೆ. ಹಿಂದಿನ ಸಾರಿ ಆಗದೇ ಇದ್ದ ಕೆಲಸಗಳನ್ನು ಈ ವರ್ಷದ ಯೋಜನೆಯಲ್ಲಿ ನಾವು ಸೇರಿಸಿಕೊಂಡಿದ್ದೇವೆ. ಇವತ್ತು ಏನಾಗಿದೆ ಎಂದರೆ, ನಾವು ಒಂದು ಯೋಜನೆಯಲ್ಲಿ ೧೦ ಕೆಲಸಗಳನ್ನು ತೆಗೆದುಕೊಂಡಿದ್ದು ಅದರಲ್ಲಿ ೬ ಕೆಲಸಗಳನ್ನು ಮುಗಿಸಿದ್ದು ೪ ಕೆಲಸಗಳು ಹಾಗಿಲ್ಲದಿದ್ದರೆ, ೪ ಕೆಲಸಗಳು ಹಾಗಿಲ್ಲವೆಂದು ನೀವು ಹೇಳುತ್ತೀರೆ ವಿನಃ ೬ ಕೆಲಸಗಳನ್ನೆ ಮುಗಿಸಿದ್ದನ್ನು ನೀವು ಹೇಳುತ್ತಿಲ್ಲ. ಯಾವ ಸದಸ್ಯರೂ ಕೂಡ ನಮ್ಮ ಕ್ಷೇತ್ರದಲ್ಲಿ ಕೆಲಸವಾಗಿದೆ ಎಂದು ಹೇಳುತ್ತಿಲ್ಲ.

ಶ್ರೀ ವೈ. ರಾಮಕೃಷ್ಣ.—ಮಂತ್ರಿಗಳು ಇರುವ ಕಡೆಗಳಲ್ಲಿ ಕೆಲಸ ಚೆನ್ನಾಗಿ ಆಗಿದೆ. ಆದರೆ ಸದಸ್ಯರು ಇರತಕ್ಕ ಕಡೆಗಳಲ್ಲಿ ಕೆಲಸ ಚೆನ್ನಾಗಿ ಆಗಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಶಿಕಾರಿಪುರಕ್ಕೆ ನಾನೇ ಹೋಗಿ ನೋಡಿಕೊಂಡು ಬಂದಿದ್ದೇನೆ. ಆಡಳಿತ ಮಂಡಲಿಯಲ್ಲಿ ಕೆಲಸವನ್ನು ತೀವ್ರಗೊಳಿಸುವ ಉದ್ದೇಶದಿಂದ ಯೂನಿಯನ್‌ಗೂ,

ಸರ್ಕಾರಕ್ಕೂ ಮತ್ತು ಮ್ಯಾನೇಜ್‌ಮೆಂಟ್‌ಗೂ ಒಂದು ಮಧುರ ಬಾಂಧವ್ಯವನ್ನು ಈಗ ವಿಸ್ತಾರ ಮಾಡಿದ್ದೇವೆ. ಅಲ್ಲಿರತಕ್ಕವರಿಗೆ ಗ್ರೂಪ್ ಇನ್‌ಷ್ಯೂರೆನ್ಸ್ ಸ್ಕೀಂನ ವ್ಯವಸ್ಥೆ ಮಾಡಿದ್ದೇವೆ. ಏಕೆಂದರೆ, ಲೈನ್‌ಮನ್ ಕೆಲಸ ಬಹಳ ಅಪಾಯಕಾರಿಯಾದಂಥಾದ್ದು. ಲೈನ್‌ಮನ್‌ಗಳು, ಸೂಪರ್‌ವೈಸರ್‌ಗಳು, ಡ್ರೈವರ್‌ಗಳು ಇನ್ನೂ ಮುಂತಾದವರು ಯಾರಾದರೂ ಕಾರ್ಯಪ್ರವೃತ್ತರಾಗಿದ್ದಾಗ ಸತ್ತರೆ ಅವರಿಗೆ ಮಂಡಲಿಯಿಂದ ಬರಬೇಕಾದ ಎಲ್ಲ ಬೆನಿಫಿಟ್‌ಗಳ ಜೊತೆಗೆ ಇನ್ನೂ ೧೦ ಸಾವಿರ ರೂ.ಗಳನ್ನು ಹೆಚ್ಚಿನ ಪರಿಹಾರ ಕೊಡುತ್ತೇವೆ. ಈ ಒಂದು ಯೋಜನೆಯನ್ನು ನಾವು ತಂದಿದ್ದೇವೆ. ಆದರೆ ಎಕಾಏಕಿ ಈ ಸಿಸ್ಟಂನ್ನು ಇಂಪ್ರೂವ್ ಮಾಡುವುದಕ್ಕಾಗುವುದಿಲ್ಲ. ೧೯೬೮ನೇ ಇಸವಿಯಲ್ಲಿ ನಮ್ಮಲ್ಲಿ ವಿದ್ಯುಚ್ಛಕ್ತಿ ಯಥೇಚ್ಛವಾಗಿದ್ದಾಗ ಬೇರೆಬೇರೆ ರಾಜ್ಯದ ಕೈಗಾರಿಕೋದ್ಯಮಿಗಳನ್ನು ನಾವು ಆಹ್ವಾನಿಸಿದ್ದೆವು. ಆಗ ಹೆಚ್ಚು ವಿದ್ಯುಚ್ಛಕ್ತಿ ಇತ್ತು. ಆದರೆ ಈಗ ಅವರಿಗೆಲ್ಲಾ ಒದಗಿಸಲು ಸಾಕಷ್ಟು ವಿದ್ಯುಚ್ಛಕ್ತಿ ಉತ್ಪಾದನೆ ಆಗುತ್ತಿಲ್ಲ. ನಮ್ಮ ರಾಜ್ಯದ ವಿದ್ಯುಚ್ಛಕ್ತಿ ಉತ್ಪಾದನಾ ವೆಚ್ಚ ಬೇರೆ ಕಡೆಗಿಂತ ಜಾಸ್ತಿ ಇದೆ. ಥರ್ಮಲ್ ಪ್ಲಾಂಟ್ ಇರುವ ಕಡೆ...

ಶ್ರೀ ವೈ. ರಾಮಕೃಷ್ಣ.—ಹೈಡ್ರೋ ಎಲೆಕ್ಟ್ರಿಕ್ ಕಡಿಮೆ ವೆಚ್ಚದಲ್ಲಿ ಆಗುತ್ತದೆ, ಥರ್ಮಲ್‌ಗೆ ಆದರೆ ಜಾಸ್ತಿ ಖರ್ಚು ಬರುತ್ತದೆಂದು ಹೇಳುತ್ತಿದ್ದೀರಿ. ಹಾಗಾದರೆ ಬೇರೆ ರಾಜ್ಯಗಳಿಗಿಂತ ಹೆಚ್ಚು ಏತಕ್ಕೆ ಛಾರ್ಜ್ ಮಾಡುತ್ತಿದ್ದೀರಿ ?

ಶ್ರೀ ಜೆ. ಹೆಚ್. ಪಟೇಲ್.—ಥರ್ಮಲ್‌ಗೆ ಕಾಸ್ಟ್ ಆಫ್ ಪ್ರೊಡಕ್ಷನ್ ಜಾಸ್ತಿ ಆಗುತ್ತದೆ. ನಮ್ಮಲ್ಲಿ ಥರ್ಮಲ್, ಹೈಡಲ್, ಮತ್ತು ಆಟಾಮಿಕ್ ಎಂದು ೩ ವಿಧ ಇದೆ. ಇವುಗಳ ಆವರೇಜ್ ಲೆಕ್ಕ ಹಾಕಿದರೆ ಎಷ್ಟು ಬರುತ್ತದೆಂದು ಗೊತ್ತಾಗುತ್ತದೆ. ಶಿಂಷಾದಲ್ಲಿ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಗೆ ಒಂದು ಯೂನಿಟ್‌ಗೆ ೨ ಪೈಸೆ ಇತ್ತು. ಈಗ ಕಾಳಿ ಪ್ರಾಜೆಕ್ಟ್‌ನಲ್ಲಿ ಉತ್ಪತ್ತಿ ಹೊಗತಕ್ಕ ವಿದ್ಯುಚ್ಛಕ್ತಿಗೆ ಯೂನಿಟ್ ಒಂದಕ್ಕೆ ೪೦ ಪೈಸೆ ಆಗುತ್ತದೆ. ನಮ್ಮಲ್ಲಿ ಹೆಚ್ಚು ಜಲವಿದ್ಯುತ್ ಯೋಜನೆಗಳೇ ಇರುವುದರಿಂದ ನಾವು ಮಳೆಯನ್ನೇ ಅವಲಂಬಿಸಿಕೊಂಡಿರಬೇಕಾಗಿದೆ. ಜೂನ್-ಜುಲೈ ತಿಂಗಳಲ್ಲಿ ಮಳೆ ಬರುವುದು ಸ್ವಲ್ಪ ತಡವಾದರೆ ನಮ್ಮ ಇಡೀ ವ್ಯವಸ್ಥೆಯೇ ಹೆಚ್ಚು ಕಡಿಮೆಯಾಗುತ್ತದೆ.

ನಾವು ಅದಕ್ಕೋಸ್ಕರವಾಗಿ ಬೇರೆ ರಾಜ್ಯಗಳಲ್ಲಿ ಇರುವಂತೆ ಥರ್ಮಲ್, ಆಟಾಮಿಕ್ ಸಿಸ್ಟಂನ್ನು ತರಬೇಕೆಂದು ಯೋಚನೆ ಮಾಡಿರುತ್ತೇವೆ. ಜನರೇಷನ್‌ಗೆ ತಕ್ಕಂಥ ಉತ್ಪಾದನಾ ಕಾರ್ಯವನ್ನೂ ಕೂಡ ನಾವು ಮಾಡಬೇಕಾಗಿರುತ್ತದೆ. ಥರ್ಮಲ್ ಪ್ಲಾಂಟ್‌ನ್ನು ಮಾಡಬೇಕಾದರೆ ಅದಕ್ಕೆ ಕಲ್ಲಿದ್ದಲು ಬೇಕಾಗುತ್ತದೆ. ನಮ್ಮ ರಾಜ್ಯದಲ್ಲೂ ಆಟಾಮಿಕ್ ಪ್ಲಾಂಟ್ ಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಿದ್ದೇವೆ. ಕೇಂದ್ರ ಸರ್ಕಾರದವರು ಅದನ್ನು ಪರಿಶೀಲನೆಯಲ್ಲಿ ಇಟ್ಟುಕೊಂಡಿರುತ್ತಾರೆ. ನಮ್ಮಲ್ಲಿ ಬೀಳತಕ್ಕಂಥ ಮಳೆಯ ಆಧಾರದ ಮೇಲೆ, ಪಶ್ಚಿಮ ಘಟ್ಟಗಳಲ್ಲಿರತಕ್ಕಂಥ ನದಿಗಳ ಮೇಲೆ ನಾವು ಅವಲಂಬಿತರಾಗಿರುತ್ತೇವೆ, ನಮ್ಮ ಬೇಡಿಕೆ ವರ್ಷ ವರ್ಷ ಹೆಚ್ಚುತ್ತಾ ಬರುತ್ತಿದೆ. ಅದಕ್ಕೆ ತಕ್ಕಂತೆ ಜನರೇಷನ್ ಕೂಡ ಇಂಪ್ರೂವ್ ಮಾಡಬೇಕಾಗಿರುತ್ತದೆ. ಕಾಳಿನದಿ ಯೋಜನೆಯ ಕಾರ್ಯದಲ್ಲಿ ಮೂರು ವರ್ಷಗಳು ತಡವಾಯಿತು. ಇಷ್ಟು ಹೊತ್ತಿಗೆ ಕಾಳಿನದಿ ಯೋಜನೆಯಿಂದ ಜನರೇಷನ್ ಬರಬೇಕಾಗಿತ್ತು. ಮುಂದಿನ ವರ್ಷ ಬರುವಂಥ ಸ್ಥಿತಿ ಇರುತ್ತದೆ. ರಾಯಚೂರು ಥರ್ಮಲ್ ಪ್ಲಾಂಟ್ ಮುಂದಿನ ವರ್ಷ ಪ್ರಾರಂಭವಾಗುವ ಸ್ಥಿತಿಯಲ್ಲಿದೆ, ಇವೆಲ್ಲದರಿಂದ ಜನರೇಷನ್ ಪ್ರಾರಂಭವಾದರೆ ನಮ್ಮ ವಿದ್ಯುಚ್ಛಕ್ತಿಯ ಸಿಸ್ಟಮ್ ಸ್ವಲ್ಪ ಮಟ್ಟಿಗೆ ಸುಧಾರಿಸುತ್ತದೆ. ಮಾನ್ಯ ಸದಸ್ಯರು ಬೆಳಿಗ್ಗೆ ಎದ್ದು ತಕ್ಷಣ ಕಾಫಿ ಕುಡಿಯುವುದಕ್ಕೆ ಎಲೆಕ್ಟ್ರಿಸಿಟಿ ಇಲ್ಲ, ಇದು ಸರಿಯೇ ಎಂದು ಜನರು ಹೇಳಿದ ಹಾಗೆ ಹೇಳಿದರೆ ಏನು ಮಾಡುವುದು ? ಜನರೇಷನ್ ಹೆಚ್ಚಾದಮೇಲೆ ಡಿಸ್ಟ್ರಿಬ್ಯೂಷನ್ ಸಿಸ್ಟಮ್‌ನ್ನು ಕೂಡ ಮಾಡಬೇಕಾಗುತ್ತದೆ. ಈಗಿರತಕ್ಕಂಥ ಉಲ್ಬಣ ಪರಿಸ್ಥಿತಿಯನ್ನು ಎಷ್ಟು ಪ್ರಯತ್ನ ಮಾಡಿ ಹತೋಟಿಗೆ ತರಬೇಕೆಂದರೂ ಕೂಡ ಹಣಕಾಸಿನ ಕೊರತೆಯಿಂದ ಸಾಧ್ಯವಾಗುತ್ತಿಲ್ಲ. ಅದಕ್ಕೆ ಹಣದ ಅವಶ್ಯಕತೆ ಬಹಳವಾಗಿ ಇರುತ್ತದೆ. ಈಗ ಆಂಧ್ರದಲ್ಲಿ ಅಕ್ಕಿಯನ್ನು ಕೊಡುತ್ತಿರುವಂತೆ ಇಲ್ಲಿ ಏತಕ್ಕೆ ಕೊಡುವುದಕ್ಕಾಗುವುದಿಲ್ಲವೆಂದು ಕೇಳಿದರೆ...

ಶ್ರೀ ವೈ. ರಾಮಕೃಷ್ಣ.—ಏತಕ್ಕೆ ಕೊಡಬಾರದು, ನಾವು ಕೇಳುತ್ತಿರುವುದು ರಿಲವೆಂಟ್ ಪಾಯಿಂಟ್ ಆಗಿರುತ್ತದೆ. ತಮಗೆ ಬೇಕಾದಾಗ ಆಂಧ್ರದಲ್ಲಿ ಅಷ್ಟು, ಕೇರಳದಲ್ಲಿ ಇಷ್ಟು ಎಂದೆಲ್ಲ ಹೇಳುತ್ತೀರಿ. ಆಂಧ್ರದಲ್ಲಿ ಎನ್. ಟಿ. ರಾಮರಾವ್‌ರವರು ಅಧಿಕಾರವನ್ನು ನಡೆಸುತ್ತಿರುತ್ತಾರೆ. ಅವರು ರೈತರಿಗೆ ಏನು ಫಿಕ್ಸ್ ಮಾಡಿರುತ್ತಾರೆ ಆ ರೀತಿ ಏತಕ್ಕೆ ಇಲ್ಲಿ ಮಾಡಬಾರದು ? ಎಲೆಕ್ಟ್ರಿಸಿಟಿಗೆ ಆ ರೀತಿ ಮಾಡಿ.

ಶ್ರೀ ಜೆ.ಹೆಚ್. ಪಟೀಲ್.—ಆಂಧ್ರದ ಬೆಲೆ, ಮಹಾರಾಷ್ಟ್ರದ ಬೆಲೆ ಏನು ಇರುತ್ತಪೆ ಆದೇ ರೀತಿ ಇಲ್ಲೂ ಮಾಡಿ ಎಂದರೆ ಅಲ್ಲಿನ ರಿಸೋರ್ಸಸ್ ಬೇರೆ, ನಮ್ಮಲ್ಲಿರತಕ್ಕಂಥ ರಿಸೋರ್ಸಸ್ ಬೇರೆ. ಸುಮಾರು ೧೮ ರಿಂದ ೨೦ ಲಕ್ಷ ಕನೆಕ್ಷನ್ ಇರತಕ್ಕಂಥ ಭಾಗಗಳಿಗೆ ಬಹಳ ಕಡಿಮೆ ಟ್ಯಾಕ್ಸ್ ಹಾಕಿರುತ್ತೇವೆ. ಟೋಟಲ್ ಕನೆಕ್ಷನ್ ಇರುವ ಪೈಕಿ ೨೦ ಪರ್ಸೆಂಟ್ ಎಂದರೆ ಇದು ಬಹಳ ಕಡಿಮೆಯೇ ಆಗುತ್ತದೆ. ಲೋ ಟೆನ್‌ಷನ್ ಕನೆಕ್ಷನ್ ಅವರೆಲ್ಲರಿಗೂ ಎರಡು ಪೈಸೆ ಜಾಸ್ತಿ ಮಾಡಿದ್ದೇವೆ. ಎಲ್.ಟಿ. ೧ಕ್ಕೆ ೪ ಪೈಸೆ, ಎಲ್.ಟಿ. ೨ಕ್ಕೆ ಎರಡು ಪೈಸೆ, ಎಲ್.ಟಿ. ೩ಕ್ಕೆ ೫ ಪೈಸೆಯಿಂದ ೭ ಪೈಸೆ, ಎಲ್.ಟಿ. ೪ಕ್ಕೆ ಏನೂ ಇಲ್ಲ, ಎಲ್.ಟಿ. ೭ಕ್ಕೆ ೫ ಪೈಸೆಯಿಂದ ೭ ಪೈಸೆ ಮಾಡಿದ್ದೇವೆ. ನಾನು ಹೇಳುವುದಾದರೆ ೨೦ ಲಕ್ಷ ಕನೆಕ್ಷನ್ ಇರತಕ್ಕ ಶೇಕಡ ೬೦–೭೦ ಭಾಗ ಕನ್‌ಸ್ಯೂಮರ್ಸ್ ಏನು ಇದ್ದಾರೆ ಅವರಿಗೆ ಇದರಿಂದ ತೊಂದರೆಯಾಗುವುದೇ ಇಲ್ಲ. ಅದನ್ನು ನಾನು ಪದೇ ಪದೇ ಹೇಳುತ್ತಲೇ ಇದ್ದೇನೆ. ಅಗ್ರಿಕಲ್ಚರ್ ಐ.ಪಿ. ಸೆಟ್‌ನವರಿಗೆ ಫ್ಲಾಟ್ ರೇಟ್ ಮಾಡಿದ್ದೇವೆ. ೧೩ ಕೋಟಿ ಟ್ಯಾಕ್ಸ್ ಕೊಡತಕ್ಕಂಥವರು ಎಂದರೆ ಕೆಲವೇ ಜನ ಇಂಡಸ್ಟ್ರಿಯಲಿಸ್ಟ್ ಮಾತ್ರ. ಎಲೆಕ್ಟ್ರಿಸಿಟಿ ಸರಬರಾಜಿನಲ್ಲಿ ತೊಂದರೆ ಇರುತ್ತದೆ. ನಮ್ಮ ಹಳ್ಳಿಗಳಿಗೆ ಅಂದರೆ ಸೀಮೆಎಣ್ಣೆ ಉರಿಸತಕ್ಕವರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದು ಬೇಡವೇ ? ರೆಫ್ರಿಜರೇಟರ್ ಉಪಯೋಗಿಸತಕ್ಕಂಥವರಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದರೆ ಲಂಬಾಣಿ ತಾಂಡದವರಿಗೆ ವಿದ್ಯುಚ್ಛಕ್ತಿಯನ್ನು ಕೊಡಲು ಹೇಗೆ ಸಾಧ್ಯವಾಗುತ್ತದೆ ?

ಡಾ।। ವಿ.ಎಸ್. ಆಚಾರ್ಯ.—ನಮಗೆ ಕಟ್ಟಿಗೆ ಇಲ್ಲ, ಸೀಮೆಎಣ್ಣೆ ಇಲ್ಲ, ನಾವು ಎಲೆಕ್ಟ್ರಿಸಿಟಿಯನ್ನು ಅವಲಂಬಿಸದೆ ಏನು ಮಾಡೋಣ ?

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ರೆಫ್ರಿಜರೇಟರ್‌ಗೆ ಏನು ಮಾಡುತ್ತೀರಿ ?

ಶ್ರೀ ಜೆ.ಹೆಚ್. ಪಟೀಲ್.—ನಮ್ಮದಲ್ಲ, ಸರ್ಕಾರದ್ದು.

ಶ್ರೀ ಎಸ್. ಬಂಗಾರಪ್ಪ.—ನೀವು ಮಂತ್ರಿಗಳಾಗಿರುವ ತನಕ ಸರ್ಕಾರದ್ದು, ನೀವು ಹೋದ ಮೇಲೆ ನಿಮ್ಮ ರೆಫ್ರಿಜರೇಟರ್‌ಗೆ ಏನು ಮಾಡುತ್ತೀರಿ ?

ಶ್ರೀ ಜೆ.ಹೆಚ್. ಪಟೀಲ್.—ನಮಗೆ ರೆಫ್ರಿಜರೇಟರ್‌ನ ಅವಶ್ಯಕತೆ ಇಲ್ಲ. ಏತಕ್ಕೆ ಮಣ್ಣಿನ ಗುಂಬವಿಲ್ಲವೇ ? ಅದರಲ್ಲಿ ನೀರು ತಣ್ಣಗಾಗುವುದಿಲ್ಲವೇ ? ನನ್ನೆಲ್ಲಂತೂ ರೆಫ್ರಿಜರೇಟರ್ ಇಲ್ಲ. ಸರ್ಕಾರದ್ದು ಇದೆ. ನಾವು ಇರುವವರೆಗೂ ಇರುತ್ತದೆ. ಮಾನ್ಯ ಅಧ್ಯಕ್ಷರೆ ಸರ್ಕಾರದ ವ್ಯಾಪ್ತಿಯಲ್ಲಿ ಕೆಲವನ್ನು ಮಾಡಬೇಕಾಗುತ್ತದೆ. ಅದನ್ನು ಮಾಡಲಿಲ್ಲವೆಂದು ಹೇಳಿದ್ದಾರೆ. ಅದನ್ನು ಮಾಡಬೇಕಾದರೆ ಹಣಕಾಸಿನ ಮುಗ್ಗಟ್ಟಿರುತ್ತದೆ. ಕೇಂದ್ರ ಸರ್ಕಾರದಿಂದ ಸಹಾಯವನ್ನು ನಿರೀಕ್ಷಣೆ ಮಾಡಿದ್ದೆವು. ಆದರೆ ಸಹಾಯ ಸಿಕ್ಕಲಿಲ್ಲ. ಆದ್ದರಿಂದ ಬಹಳ ನಿರಾಶರಾಗಿದ್ದೇವೆ. ನಮಗೆ ಯಾವ ರೀತಿಯ ಪ್ರೋತ್ಸಾಹವೂ ಇಲ್ಲದೆ ನಮಗೆ ಒಳಗೆ ಇರತಕ್ಕಂಥ ಆರ್ಥಿಕ ಬಿಕ್ಕಟ್ಟಿನಲ್ಲಿ ನಮ್ಮ ಇತಿಮಿತಿಗಳಲ್ಲಿ ನಾವು ಈವತ್ತು ಬಹುತೇಕ ಭಾಗದ ಜನರಿಗೆ ಎಫೆಕ್ಟ್ ಆಗದ ರೀತಿಯಲ್ಲಿ ಕೊಡಲಿಕ್ಕೆ ಶಕ್ತಿ ಇರುವವರ ಮೇಲೆ ತೆರಿಗೆಯನ್ನು ಹಾಕಿದ್ದೇವೆ.

ಶ್ರೀ ಭೀಮಣ್ಣ ಖಂಡ್ರೆ.—ತಾವು ಹೇಳಿದಹಾಗೆ ಯಾರಿಗೂ ಒಂದು ಪೈಸೆ ಹೆಚ್ಚಾಗುವುದಿಲ್ಲವೆ?

ಶ್ರೀ ಜೆ.ಹೆಚ್. ಪಟೀಲ್.—ಅಗ್ರಿಕಲ್ಚರಿಸ್ಟ್‌ಗೆ ಏನು ಆಗುವುದಿಲ್ಲ.

ಡಾ।। ವಿ.ಎಸ್. ಆಚಾರ್ಯ.—ವಿದ್ಯುಚ್ಛಕ್ತಿಯನ್ನು ಅವಲಂಬಿಸಿರುವ ೧೬ ಲಕ್ಷ ಮನೆಗಳವರಿಗೆ ಎಲ್ಲರಿಗೂ ಬಹಳ ತೊಂದರೆಯಾಗುತ್ತಿದೆ.

ಶ್ರೀ ಜೆ.ಹೆಚ್. ಪಟೀಲ್.—ಲೋಟೆನ್‌ಷನ್ ಪವರ್ ಉಪಯೋಗಿಸತಕ್ಕಂಥವರಿಗೆ ಎರಡು ಮೂರು ಪೈಸೆಯನ್ನು ಜಾಸ್ತಿ ಮಾಡಿದ್ದೇವೆ. ಆಷ್ಟಾದರೂ ಹಣಕಾಸನ್ನು ರೂಢಿಸಿಕೊಳ್ಳದೇ ಹೋದರೆ ನಾವು ಪ್ರಗತಿಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹಣಕಾಸಿನ ಸಂಪನ್ಮೂಲಗಳನ್ನು ಸುಧಾರಣೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ತಾವು ಉದ್ದುದ್ದಕ್ಕೆ ಭಾಷಣ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಜೆ.ಹೆಚ್. ಪಟೀಲ್.—ನಾನು ಭಾಷಣ ಮಾಡುವುದೇ ಬೇಡವೆಂದು ಹೇಳಿದರೆ ಏನು ಮಾಡುವುದು? ವೋಟ್ ಕೇಳಬೇಕಾದರೆ ಭಾಷಣ ಮಾಡಬೇಕಾಗುತ್ತದೆಯಲ್ಲ.

ಶ್ರೀ ಎಸ್. ಬಂಗಾರಪ್ಪ.—ಭಾಷಣ ಬೇಡ ಎಂದರೆ ದೊಡ್ಡ ದೊಡ್ಡ ಭಾಷಣ ಬೇಡ, ಸಣ್ಣ ಸಣ್ಣ ಭಾಷಣ ಮಾಡಿ ಎಂದು.

ಶ್ರೀ ಜೆ.ಹೆಚ್. ಪಟೀಲ್.—ಆದೇನೇ ಇರಲಿ ಅದನ್ನು ಅಲ್ಲಿಗೆ ನಿಲ್ಲಿಸೋಣ.

ಶ್ರೀ ಭೀಮಣ್ಣ ಖಂಡ್ರೆ.—ಮಹಾರಾಷ್ಟ್ರ, ಆಂಧ್ರಪ್ರದೇಶದಲ್ಲಿ ಸೇಲ್ಸ್ ಟ್ಯಾಕ್ಸ್ ಮತ್ತು ಮಾರ್ಕೆಟ್ ಸೆಸ್ ಏನು ಇದೆ ಅದರಂತೆ ಮಾಡುತ್ತೀರಾ ?

ಶ್ರೀ ಜೆ.ಹೆಚ್. ಪಟೀಲ್.—ಅದನ್ನು ಪರಿಶೀಲನೆ ಮಾಡುತ್ತೇನೆ.

ಪಿ.ಎಂ.

ಶ್ರೀ ಎಸ್. ಬಂಗಾರಪ್ಪ.—ಈಗಿರುವಂತಹ ತೆರಿಗೆಗಳನ್ನು ಹೆಚ್ಚು ಮಾಡುವ ಬಗ್ಗೆ ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳುವುದಾದರೂ ಇಷ್ಟೆ, ವಿದ್ಯುತ್ ಮಂಡಲಿ ಇಠಬಹುದು, ಕೆ.ಎಸ್.ಆರ್.ಟಿ.ಸಿ ಇರಬಹುದು ಅಥವಾ ಮತ್ತೊಂದು ಇರಬಹುದು, ಇಂತವುಗಳು ತೆರಿಗೆಯನ್ನಾಗಲೀ ಅಥವಾ ಬೇರೆ ದರಗಳನ್ನು ಹೆಚ್ಚು ಮಾಡುವಾಗ ಕೆಲವೊಂದು ಆಧಾರಗಳ ಮೇಲೆ ಹೆಚ್ಚು ಹೆಚ್ಚು ಮಾಡಿದರೆ ನವ್ಮ ತಕರಾರು ಏನಿಲ್ಲ. ಈಗ ಉದಾಹರಣೆಗೆ ಕೆ.ಎಸ್.ಆರ್.ಟಿ.ಸಿ ಅವರು ಡೀಜಲ್ ಮತ್ತು ಚಾಸಿಗಳ ದರದ ಆಧಾರದ ಮೇಲೆ ಟಿಕೇಟ್ ದರಗಳನ್ನು ಹೆಚ್ಚು ಮಾಡಬೇಕಾಗುತ್ತದೆ. ಅದರೆ ಅದಕ್ಕೂ ಮೊದಲು ಸರ್ಕಾರದ ಪ್ರತಿ ಇಲಾಖೆ ಹಾಗೂ ವಿವಿಧ ಕಾರ್ಪೊರೇಷನ್‌ಗಳು ಹಾಗೂ ಬೋರ್ಡುಗಳಲ್ಲಿರುವಂತಹ ಲೂಪ್-ಹೋಲ್ಸ್‌ನ್ನು ಮೊದಲು ಪ್ಲಗ್ ಮಾಡಬೇಕು. ಇದನ್ನು ಮೊದಲು ಮಾಡದೆ ದರಗಳನ್ನು ಹೆಚ್ಚು ಮಾಡುವುದು ಸರಿಯಾದ ಕ್ರಮವಲ್ಲ. ಯಾವುದೇ ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದರೂ ಕೂಡ ತೆರಿಗೆಯನ್ನು ಹಾಕಲೇಬೇಕಾಗುತ್ತದೆ, ಪ್ರಜಾ ಪ್ರಭುತ್ವ ಪದ್ಧತಿಯಲ್ಲಿ ಇದು ಅನಿವಾರ್ಯ. ಆದರೆ ಹಣ ಸೋರಿಹೋಗುತ್ತಿರುವುದನ್ನು ತಡೆಗಟ್ಟದೆ ತೆರಿಗೆ ಜಾಸ್ತಿ ಮಾಡುವ ಪ್ರವೃತ್ತಿ ಏನಿದೆ, ಇದು ಯಾವ ಸರ್ಕಾರಕ್ಕೂ ಪರ್ಯಾದೆ ತರುವುದಿಲ್ಲ. ಮಾನ್ಯ ಸಾರಿಗೆ ಮಂತ್ರಿಗಳು ಸಾರಿಗೆ ಇಲಾಖೆಲ್ಲಿರುವಂತಹ ಕೆಲವು ಲೂಪ್ ಹೋಲ್ಸ್‌ನ್ನು ಪ್ಲಗ್ ಮಾಡಿದರೆ ಲಕ್ಷಾಂತರ ರೂಪಾಯಿಗಳಷ್ಟು ಹಣ ಉಳಿತಾಯವಾಗುತ್ತದೆಂದು ಹೇಳಿದರು. ಅದೇ ರೀತಿ ತಮ್ಮ ಇಲಾಖೆಯಲ್ಲಿ ಏನೇನು ಪರಿಸ್ಥಿತಿ ಇದೆ ಎಂಬುದು ತಮಗೂ ಗೊತ್ತಿದೆ. ಇದನ್ನೆಲ್ಲಾ ಸರಿಪಡಿಸದೆ ತೆರಿಗೆ ಹೆಚ್ಚು ಮಾಡುವುದು ಸರಿಯೇ ? ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಯಾವ ತೆರಿಗೆಗಳನ್ನೂ ಕಡಿಮೆ ಮಾಡುತ್ತಿಲ್ಲ. ಇರುವುದನ್ನೇ ಹೆಚ್ಚು ಮಾಡುತ್ತಿದ್ದೀರಿ. ಮುಖ್ಯವಾಗಿ ಹಣ ಸೋರಿಹೋಗುತ್ತಿರುವುದನ್ನು ತಡೆಗಟ್ಟಲು ಏನಾದರೂ ಕಾರ್ಯಕ್ರಮ ಹಾಕಿಕೊಂಡಿದ್ದೀರಾ ಎಂಬುದನ್ನು ತಾವು ಮಾನ್ಯ ಸಭೆಗೆ ತಿಳಿಸಬೇಕು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ಈ ಹೆಚ್ಚಿನ ತೆರಿಗೆಯಿಂದ ಸುಮಾರು ೨೦ ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಆದಾಯ ಬರುತ್ತದೆಂದು ಹೇಳಿದರು. ಅದೇ ಕಾಲಕ್ಕೆ ಸುಮಾರು ೨೮ ಕೋಟಿ ರೂಪಾಯಿಗಳಷ್ಟು ಬಾಕಿ ವಸೂಲಿ ಆಗಬೇಕಾಗಿದೆ ಎಂಬ ವಿಚಾರವನ್ನು ಸಹ ಮಾನ್ಯ ಮಂತ್ರಿಗಳು ಹೇಳಿದರು. ಈ ಬಾಕಿ ಎಷ್ಟು ವರ್ಷಗಳಿಂದ ಇದೆ, ಸರ್ಕಾರದ ಇಲಾಖೆಗಳ ಮೂಲಕ ಎಷ್ಟು ಬಾಕಿ ಇದೆ ಮತ್ತು ಚಾಸಿಗಿ ಸಂಸ್ಥೆಗಳ ಮೂಲಕ ಎಷ್ಟು ಬಾಕಿ ಬರಬೇಕಾಗಿದೆ ಹಾಗೂ ಈ ಬಾಕಿ ವಸೂಲಿ ಮಾಡಲು ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಮತ್ತೆ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ದಿನದಲ್ಲಿ ೬ ಗಂಟೆಗಳ ಕಾಲ ವಿದ್ಯುತ್ ಸಂಪರ್ಕವನ್ನು ಬಂದ್ ಮಾಡಿದರೆ ಮತ್ತೆ ಕೆಲವು ಜಿಲ್ಲೆಗಳಲ್ಲಿ ದಿನದಲ್ಲಿ ೮ ಗಂಟೆಗಳ ಕಾಲ ಬಂದ್ ಮಾಡಲಾಗುತ್ತಿದೆ. ಒಂದೊಂದು ಕಡೆ ಒಂದೊಂದು ನೀತಿಯನ್ನು ಅನುಸರಿಸುವುದರ ಮೂಲಕ ತಾರತಮ್ಯ ಮಾಡಲಾಗುತ್ತಿದೆ ಎಂದು ನಮಗೆ ತಿಳಿದು ಬಂದಿದೆ. ಈ ತಾರತಮ್ಯ ಆಗಿದೆಯೋ ಅಥವಾ ಇಲ್ಲವೋ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ವಿ.ಎಸ್. ಆಚಾರ್ಯ.—ವಿದ್ಯುತ್ ಹಂಚಿಕೆ ಮಾಡುವ ಹಂತದಲ್ಲಿ ಟ್ರಾನ್ಸ್‌ಮಿಷನ್ ಲಾಸ್ ಶೇಕಡಾ ೨೨ರಷ್ಟು ಇರುವಾಗ ಮತ್ತು ಶೇಕಡಾ ೫ ರಿಂದ ಶೇಕಡಾ ೬ರವರೆಗೆ ಕಳ್ಳತನದಿಂದ ಕೆಲವರು ವಿದ್ಯುತ್ ಬಳಸುತ್ತಿರುವುದನ್ನು ತಡೆಗಟ್ಟಲು ಏನಾದರು ಪ್ರತ್ಯೇಕ ವ್ಯವಸ್ಥೆ ಮಾಡಿದ್ದೀರಾ ?

ಈ ಬಗ್ಗೆ ಉಸ್ತುವಾರಿ ತಪಾಷಣೆ ಕೈಕೊಂಡಿದ್ದೀರಾ ? ಈ ವಿಚಾರದಲ್ಲಿ ತಾವು ಒಂದು ಪರ್ಸೆಂಟ್ ನಷ್ಟು ಉಳಿತಾಯ ಮಾಡಿದರೂ ಸಹ ಕೆ.ಇ.ಬಿಗೆ ಒಂದೂವರೆಯಿಂದ ಎರಡು ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಆದಾಯ ಬರುತ್ತದೆ, ಮತ್ತೆ ಬಡವರ ಮನೆಗಳಿಗೆ ಮೀಟರ್ ಇಲ್ಲದೆ ವಿದ್ಯುತ್‌ನ್ನು ಒದಗಿಸಬಹುದು, ಒಂದು ಮನೆಗೆ ೫ ದೀಪಗಳನ್ನು ಹಾಕಿ ೫ ರೂಪಾಯಿ ವಸೂಲಿ ಮಾಡಬಹುದು. ಒಂದು ವೇಳೆ ಅವರು ಏನಾದರೂ ೬ನೇ ದೀಪ ಹಾಕಿಕೊಂಡರೆ ವಿದ್ಯುತ್ ಸರಬರಾಜು ಬಂದ್ ಆಗುತ್ತದೆ. ಹತ್ತು ದೀಪಗಳು ಬೇಕಾದವರಿಗೆ ಹತ್ತು ದೀಪಗಳನ್ನು ಹಾಕಿ ಹತ್ತು ರೂಪಾಯಿ ವಸೂಲಿ ಮಾಡಬಹುದು. ಇದರಿಂದ ಮೀಟರ್ ರೀಡಿಂಗ್ ತೆಗೆದುಕೊಳ್ಳುವುದು ತಪ್ಪುತ್ತದೆ ಹಾಗೂ ಉಸ್ತುವಾರಿ ಖರ್ಚು ಸಹ ಕಡಿಮೆಯಾಗುತ್ತದೆ. ಇದರ ಜೊತೆಗೆ ಟ್ರಾನ್ಸ್‌ಮಿಷನ್ ಲಾಸ್‌ನ್ನು ತಡೆಗಟ್ಟಿದರೆ ಕೋಟಿಗಟ್ಟಲೆ ಹಣ ಉಳಿತಾಯವಾಗುತ್ತದೆ. ತಾವು ಯಾವುದೇ ತೆರಿಗೆಯನ್ನು ಹೆಚ್ಚು ಮಾಡುವಾಗ ಕಡಿಮೆ ತೆರಿಗೆ ಇರುವಂತಹ ನಮ್ಮ ನೆರೆಹೊರೆ ರಾಜ್ಯಗಳಾದ ಮಹಾರಾಷ್ಟ್ರ, ಕೇರಳಾ, ತಮಿಳುನಾಡು ಮುಂತಾದ ರಾಜ್ಯಗಳು ತಮ್ಮ ಕಣ್ಣಿಗೆ ಬೀಳುವುದಿಲ್ಲ. ಅತಿ ಹೆಚ್ಚು ತೆರಿಗೆ ಇರುವಂತಹ ಪಂಜಾಬ್‌ನಂತಹ ರಾಜ್ಯಗಳೇ ತಮ್ಮ ಕಣ್ಣಿಗೆ ಕಾಣುತ್ತದೆ. ಅದನ್ನು ನೋಡಿಕೊಂಡು ಇಲ್ಲಿ ತೆರಿಗೆ ಹೆಚ್ಚು ಮಾಡುತ್ತೀರಿ. ಇದಕ್ಕೆ ಬದಲು ಉಸ್ತುವಾರಿ ಖರ್ಚುಗಳನ್ನು ಏತಕ್ಕೆ ಕಡಿಮೆ ಮಾಡಬಾರದು ? ಈಗ ಆಲ್ ಎಲೆಕ್ಟ್ರಿಕ್ ಹೋಂನವರಿಗೆ ಕಿಲೋವಾಟ್ ಆಧಾರದ ಮೇಲೆ ಚಾರ್ಜ್ ಮಾಡಿದ್ದೀರಿ. ಇದರ ಜೊತೆಗೆ ಮಿನಿಮಮ್ ಚಾರ್ಜನ್ನು ಸಹ ಜಾಸ್ತಿ ಮಾಡಿದ್ದೀರಿ. ಇದರಿಂದ ಮಧ್ಯಮವರ್ಗದ ಜನರಿಗೆ ಭಾರಿ ದೊಡ್ಡ ಹೊರೆ ಬಿದ್ದಿದೆ. ಕಳೆದ ಒಂದೆರಡು ತಿಂಗಳುಗಳಿಂದ ಇದರ ಒಂದು ಹೊರೆ ಹೆಚ್ಚಾಗಿದೆ ಎಂದು ಹೇಳಿದರೆ ಅದು ಉತ್ಪ್ರೇಕ್ಷೆಯಾಗುವುದಿಲ್ಲ. ಅಂಕಿ ಅಂಶಗಳ ಮೂಲಕ ಹೇಳಲು ಈಗ ಸಮಯವಿಲ್ಲ. ಒಂದುಕಡೆ ತೆರಿಗೆಯನ್ನು ಹೆಚ್ಚು ಮಾಡಿದ್ದೀರಿ, ಮತ್ತೊಂದು ಕಡೆ ವಿದ್ಯುತ್ ದರವನ್ನು ಹೆಚ್ಚು ಮಾಡಿದ್ದೀರಿ. ಇದರಿಂದ ಆಲ್–ಎಲೆಕ್ಟ್ರಿಕ್ ಹೋಂನವರ ವೇದನೆ ಹೆಚ್ಚಾಗಿದೆ. ಕಟ್ಟಿಗೆ ದೊರೆಯದಿದ್ದಾಗ ಗೀಜರ್‌ನ್ನು ಇಟ್ಟುಕೊಂಡರೆ ಅದು ಅಪರಾಧವಲ್ಲ. ಅವಶ್ಯಕತೆ ಇರುವವರು ರೆಫ್ರಿಜರೇಟರನ್ನು ಸಹ ಇಟ್ಟುಕೊಳ್ಳಬಹುದು. ಈ ಕಾರಣದಿಂದ ಈ ವರ್ಗದ ಜನರನ್ನು ಅವಹೇಳನ ಮಾಡುವುದು ಸರಿಯಲ್ಲ. ಒಟ್ಟಿನಲ್ಲಿ ಮಧ್ಯಮವರ್ಗದ ಜನರ ಮೇಲೆ ದೊಡ್ಡ ಹೊರೆ ಬಿದ್ದಿದೆ. ಇದನ್ನು ಕಡಿಮೆ ಮಾಡಬೇಕು. ಈ ಇಲಾಖೆಯಲ್ಲಿ ಇರುವಂತಹ ನ್ಯೂನತೆಗಳನ್ನು ಸರಿಪಡಿಸಿದ್ದೇ ಆದರೆ ಈ ತೆರಿಗೆ ಹೊರೆಯನ್ನು ಕಡಿಮೆ ಮಾಡಬಹುದು. ಈ ಬಗ್ಗೆ ಉತ್ತರ ಕೊಡಲು ಮಾನ್ಯ ಮಂತ್ರಿಗಳಿಗೆ ಈಗಲೇ ಸಾಧ್ಯವಾಗದಿದ್ದರೆ ಇದನ್ನು ಸೋಮವಾರ ದಿವಸ ತೆಗೆದುಕೊಳ್ಳುವುದು ಒಳ್ಳೆಯದೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕಳೆದ ಸಲ ಈ ಟ್ರಾನ್ಸ್‌ಮಿಷನ್ ಲಾಸ್‌ನ್ನು ಕಡಿಮೆ ಮಾಡಲು ಒಂದು ಸಿಸ್ಟಮ್‌ನ್ನು ಜಾರಿಗೆ ತರುತ್ತೇವೆಂದು ಹೇಳಿದ್ದರು. ಅದರಂತೆ ಅದು ಜಾರಿಗೆ ಬಂದಿದ್ದರೆ ಅದರಿಂದ ಎಷ್ಟು ಹಣ ಉಳಿತಾಯವಾಗಿದೆ ಎಂಬುದನ್ನು ತಿಳಿಸಬೇಕು. ತೆರಿಗೆಯನ್ನು ೬ ಪೈಸೆಯಿಂದ ೮ ಪೈಸೆಗೆ ಹೆಚ್ಚು ಮಾಡಿದ್ದರೆ ಎಷ್ಟು ನಷ್ಟವಾಗುತ್ತದೆಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಈ ತೆರಿಗೆಯಿಂದ ಬಡವರಿಗೆ ಮತ್ತು ಮಧ್ಯಮವರ್ಗದವರಿಗೆ ಹೆಚ್ಚಿನ ಹೊರೆಯಾಗುವುದರಿಂದ ಇದನ್ನು ಕಡಿಮೆ ಮಾಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಜೆ.ಎಚ್. ಪಟೇಲ್.—ನಾನು ಮೊದಲೇ ಒಂದು ವಿಷಯ ಹೇಳುವುದನ್ನು ಮರೆತಿದ್ದೆ. ಏನೆಂದರೆ, ಬಳಕೆದಾರರು ಏನು ಒಟ್ಟು ವಿದ್ಯುತ್ ಬಳಸುತ್ತಾರೆ ಅದರ ಆಧಾರದ ಮೇಲೆ ಟ್ಯಾರಿಫ್ ಜಾಸ್ತಿ ಮಾಡಿದ್ದೇವೆ. ಇಲ್ಲಿ ನಾವು ಯಾರು ಯಾರನ್ನು ಟಚ್ ಮಾಡುತ್ತಿಲ್ಲವೆಂದರೆ, ಡೊಮೆಸ್ಟಿಕ್ ಕನ್‌ಸ್ಯೂಮರ್ಸ್, ಇರಿಗೇಷನ್ ಪರ್‌ಪಸ್‌ಗೆ ಹಾಗೂ ಆಲ್–ಎಲೆಕ್ಟ್ರಿಕ್ ಹೋಂಗೆ ವಿದ್ಯುಚ್ಛಕ್ತಿ ಬಳಸುತ್ತಿರುವವರು ಈ ಹೆಚ್ಚುವರಿ ತೆರಿಗೆಯಿಂದ ಸರ್ಕಾರಕ್ಕೆ ಒಂದು ವರ್ಷಕ್ಕೆ ೧೩ ಕೋಟಿ ಆದಾಯ ಬಂದರೂ ಸಹ ಆದರಲ್ಲಿ ಎರಡು ಕೋಟಿ ರೂಪಾಯಿಗಳನ್ನು ಕೆ.ಇ.ಬಿ.ನವರಿಗೆ ಮತ್ತು ೨.೩ ಕೋಟಿ ರೂಪಾಯಿಗಳನ್ನು ಕೆ.ಪಿ.ಸಿ.ನವರಿಗೂ ಸಂದಾಯ ಮಾಡಲಾಗುತ್ತದೆ.

ಇನ್ನು ಹಣ ಸೋರಿಹೋಗುತ್ತಿರುವುದನ್ನು ಕಡಿಮೆ ಮಾಡಬೇಕೆಂದು ಸಲಹೆ ಮಾಡಿದ್ದಾರೆ. ಅದೇ ರೀತಿ ಮಾನ್ಯ ಚಿಮ್ಮನಕಟ್ಟಿಯವರು ಯಾರು ಯಾರಿಂದ ೨೮ ಕೋಟಿ ರೂಪಾಯಿಗಳು ಬಾಕಿ ಬರಬೇಕಾಗಿದೆ ಎಂದು ಕೇಳಿದ್ದಾರೆ. ವಿ.ಐ.ಎಸ್.ಎಲ್.ನಿಂದಲೇ ಹತ್ತು ಕೋಟಿ ರೂಪಾಯಿಗಳು ಬಾಕಿ ಬರಬೇಕಾಗಿದೆ. ಮುನಿಸಿಪಾಲಿಟಿಗಳಿಂದ ಆರೂವರೆ ಕೋಟಿ ರೂಪಾಯಿಗಳು ಬಾಕಿ ಬರಬೇಕಾಗಿದೆ. ಪಂಚಾಯತಿಗಳಿಂದ ಎರಡೂವರೆ ಕೋಟಿ ರೂಪಾಯಿಗಳು ಬಾಕಿ ಬರಬೇಕಾಗಿದೆ.

ಸುಮಾರು ೧೬-೧೭ ಕೋಟಿ ರೂಪಾಯಿಗಳು ಗೌರ್ನಮೆಂಟ್ ಅಂಡರ್ ಟೇಕಿಂಗ್ ಕಡೆಯಿಂದಲೇ ಬರಬೇಕಾಗಿದೆ. ಇಂಡಿಯನ್ ಅಲ್ಯೂಮಿನಿಯಂ ಕಂಪನಿಯಿಂದ ನಾಲ್ಕು ಕೋಟಿ ರೂಪಾಯಿಗಳು ಬರುವುದು ಇದೆ. ಈ ಬಗ್ಗೆ ಅವರು ಕೋರ್ಟಿಗೆ ಹೋಗಿದ್ದಾರೆ. ಆದ್ದರಿಂದ ಇದು ಡಿಸ್‌ಪ್ಯೂಟ್‌ನಲ್ಲಿದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಬರಬೇಕಾದಂಥ ಹಣವನ್ನು ಬಾಕಿ ಇಟ್ಟುಕೊಂಡು ನಾವು ಯಾವ ರೀತಿಯಲ್ಲಿ ಸರಿದೂಗಿಸಬೇಕೆಂಬುದನ್ನು ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳಬೇಕು, ಅತಿ ಹೆಚ್ಚಿನ ರೀತಿಯಲ್ಲಿ ತೆರಿಗೆಯನ್ನು ಹಾಕಿ ಜನರಿಗೆ ಕಷ್ಟಕೊಡಬೇಕೆಂಬ ಇಚ್ಛೆ ನನಗೆ ಇಲ್ಲ. ಆದ್ದರಿಂದ ಮಾನ್ಯ ಸದಸ್ಯರೆಲ್ಲರೂ ಈ ವಿಧೇಯಕವನ್ನು ಸರ್ವಾನುಮತದಿಂದ ಒಪ್ಪಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.— ಸ್ವಾಮಿ, ವಿ.ಐ.ಎಸ್.ಎಲ್. ನವರಿಂದ ಹಣ ಬಾಕಿ ಬರಬೇಕೆಂದು ತಾವು ಕಳೆದ ಅಧಿವೇಶನದಲ್ಲಿಯೇ ತಿಳಿಸಿದ್ದೀರಿ. ಆದರೆ ಇದುವರೆಗೂ ಏತಕ್ಕೆ ಅವರಿಂದ ಹಣ ವಸೂಲು ಮಾಡಿಲ್ಲ.

ಶ್ರೀ ಜೆ.ಹೆಚ್. ಪಟೇಲ್.—ಸ್ವಾಮಿ, ಒಂದು ವೇಳೆ ಅವರು ನಮ್ಮ ಬಾಕಿಯ ಹಣವನ್ನು ಕೊಡಲಿಲ್ಲವೆಂದು ಹೇಳಿ ನಾವು ವಿದ್ಯುತ್ ನಿಲ್ಲಿಸಿದರೆ ಸುಮಾರು ೧೪ ಸಾವಿರ ಕೆಲಸಗಾರರಿಗೆ ಕಷ್ಟವಾಗುತ್ತದೆ. ಅದನ್ನು ನೋಡಿ ನಾವು ಹಾಗೆಯೇ ಬಿಟ್ಟುಕೊಂಡು ಬರುತ್ತಿದ್ದೇವೆ. ಆದ್ದರಿಂದ ಈ ಸದನದ ಮಾನ್ಯ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಇವತ್ತು ನಾನು ಈ ಸದನದಲ್ಲಿ ಮಂಡಿಸಿರುವಂಥ ವಿಧೇಯಕವನ್ನು ಸರ್ವಾನುಮತದಿಂದ ಪಾಸು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

MR. DEPUTY SPEAKER.—Now I will put the consideration motion to the vote of the House,

The question is,:

"That the Karnataka Electricity (Taxation on Consumption) (Amendment) Bill, 1983 be taken into consideration".

The Motion was adopted

CLAUSE BY CLAUSE CONSIDERATION

MR. DEPUTY SPEAKER.—The question is:

"That Clauses 2 and 3 do stand part of the Bill".

The motion was adopted and Clauses 2&3 were added to the Bill

CLAUSE 1 ETC.

MR. DEPUTY SPEAKER.—The question is:

"That Clause 1, Title and the Preamble do stand part of the Bill."

The motion was adopted and Clause 1, Title and the Preamble were added to the Bill.

MOTION TO PASS

SRI J.H. PATEL.—Sir, I beg to move that

"The Karnataka Electricity (Taxation on Consumption) (Amendment) Bill, 1983 be passed"

MR. DEPUTY SPEAKER.—The question is:

"That the Karnataka Electricity(Taxation on Consumption) (Amendment) Bill, 1983 be passed."

The motion was adopted and the Bill was passed

PRIVATE MEMBERS RESOLUTIONS

Reg: Establishment of Steel Plant at Vijayanagar

† ಶ್ರೀ ಪಿ. ರಾಂದೇವ್ (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೇ ಕಳೆದ ಅಧಿವೇಶನದಲ್ಲಿಯೇ ನಾನು ಈ ಒಂದು ನಿರ್ಣಯವನ್ನು ಪ್ರಸ್ತಾಪ ಮಾಡಿದ್ದೆ. ಅದು ಏನೆಂದರೆ ವಿಜಯನಗರದ ಉಕ್ಕಿನ ಕಾರ್ಖಾನೆಯನ್ನು ವಿಜಯನಗರದಲ್ಲಿ ಸ್ಥಾಪನೆ ಮಾಡುವ ಬಗ್ಗೆ ಈ ವಿಜಯನಗರದ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕೆಂದು ನಾವು ಕೇಂದ್ರ ಸರ್ಕಾರದ ಮೇಲೆ ಆಗಾಗ್ಗೆ ಒತ್ತಡಗಳನ್ನು ತರುತ್ತಿದ್ದೇವೆ. ಈ ಒಂದು ನಿರ್ಣಯದ ಬಗ್ಗೆ ಹಲವಾರು ಕಡೆಗಳಲ್ಲಿ ಘಟನೆಗಳು ನಡೆದಿವೆ. ಇಡೀ ರಾಷ್ಟ್ರದಲ್ಲಿ ಈ ಬಗ್ಗೆ ವಾದವಿವಾದಗಳು ಹಬ್ಬಿದ್ದವು. ಆದರೂ ಕೂಡ ವಿಜಯನಗರದ ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾತ್ರ ಆಗಲಿಲ್ಲ.

(ಶ್ರೀ ಡಿ.ಬಿ. ಚಂದ್ರೇಗೌಡರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈ ಒಂದು ಕಾರ್ಖಾನೆಯನ್ನು ಸ್ಥಾಪನೆ ಮಾಡುವ ಬಗ್ಗೆ ಕೇಂದ್ರ ಸರ್ಕಾರದ ಮಂತ್ರಿಗಳು ಮತ್ತು ರಾಜ್ಯ ಸರ್ಕಾರದ ಮಂತ್ರಿಗಳು ಪರಸ್ಪರ ಮಾತುಕತೆಯನ್ನು ಕೂಡ ಮಾಡಿದ್ದಾರೆ. ರಾಜ್ಯದಲ್ಲಿ ನಾನಾಕಡೆಗಳಲ್ಲಿ ಚಳುವಳಿಗಳು ಕೂಡ ನಡೆದಿವೆ. ಮತ್ತು ಕರ್ನಾಟಕ ರಾಜ್ಯದ ಜನರಲ್ಲಿ ಒಂದು ಗಲಿಬಿಲಿಯಾದಂಥ ವಾತಾವರಣ ಉಂಟಾಗಿದೆ ಸುಮಾರು ೧೨ ವರ್ಷಗಳಿಂದ ಅಂದರೆ ೧೯೭೧ನೇ ಇಸವಿಯಲ್ಲಿ ಈ ವಿಜಯನಗರದ ಉಕ್ಕಿನ ಕಾರ್ಖಾನೆ ಯನ್ನು ಸ್ಥಾಪನೆ ಮಾಡುವುದಕ್ಕೆ ಪ್ರಧಾನಿಯವರು ಅಸ್ತಿಭಾರವನ್ನು ಹಾಕಿದರು. ಆವರು ಯಾವ ಗಳಿಗೆಯಲ್ಲಿ ಈ ಕಾರ್ಖಾನೆಗೆ ಅಸ್ತಿಭಾರವನ್ನು ಹಾಕಿದರೋ ಇದುವರೆಗೂ ಕೂಡ ಆ ಉಕ್ಕಿನ ಕಾರ್ಖಾನೆ ಸ್ಥಾಪನೆಯಾಗಲು ಕಾಲಾವಕಾಶ ಕೂಡಿ ಬರಲಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸ್ವಾಮಿ, ಗಳಿಗೆ ಮತ್ತು ಶಾಸ್ತ್ರಗಳನ್ನು ಹೇಳಿಕೊಡುವವರು ತಮ್ಮಂಥವರೇ. ಅವರೇನು ಗಳಿಗೆ ಮತ್ತು ಕಾಲ ನೋಡಿಕೊಂಡು ಬರುವುದಿಲ್ಲ.

ಅಧ್ಯಕ್ಷರು.—ನಾಳೆಯಿಂದ ನಿಮ್ಮನ್ನು ಕೇಳೋಣ ಬಿಡಿ.

ಶ್ರೀ ಗೋವಿಂದ ಪಿ.ಒಡೆಯರಾಜ್.—ಸ್ವಾಮಿ, ಗಳಿಗೆ ಮತ್ತು ಕಾಲ ಹೇಳುವುದು ನಮ್ಮಂತವರಿಗೆ ಬರುವುದಿಲ್ಲ.

ಶ್ರೀ ಪಿ. ರಾಂದೇವ್.—ತಾವು ನಮ್ಮ ಪಕ್ಷದಲ್ಲಿದ್ದಾಗ ವಿಜಯನಗರದ ಉಕ್ಕಿನ ಕಾರ್ಖಾನೆಗೆ ಅಸ್ತಿಭಾರವನ್ನು ಹಾಕಿದ್ದು ಇರಬೇಕು. ಆದರೆ ತಾವು ಈಗ ಪಕ್ಷಾಂತರ ಮಾಡಿದ್ದೀರಿ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸ್ವಾಮಿ, ನಾನು ಮೊದಲಿನಿಂದಲೂ ಸಂಸ್ಥಾ ಕಾಂಗ್ರೆಸ್ ನಲ್ಲಿಯೇ ಇದ್ದೇನೆ. ನಾವು ಆ ಸಂಸ್ಥೆಯನ್ನು ಸ್ಥಾಪನೆ ಮಾಡಿ ಬೆಳೆಸಿದ್ದೇವೆ.

---

†ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.